ವೈದ್ಯಕೀಯ ಕಾಲೇಜುಗಳು ಸಾಂಪ್ರದಾಯಿಕ ಶಿಕ್ಷಣವನ್ನು ನೀಡುವ ಜೊತೆ ಜೊತೆಗೆ ಸಾಮಾಜಿಕ ಗುರಿ ಮತ್ತು ದೇಶದ ಹಿತ ಕಾಪಾಡುವ ನಿಟ್ಟಿನಲ್ಲಿ ಯೋಚಿಸಬೇಕಿದೆ. ಏಕರೂಪದ ಮತ್ತು ಗುಣಮಟ್ಟದ ಚಿಕಿತ್ಸೆ ನೀಡುವ ಕುರಿತು ಅತ್ಯಂತ ಹೆಚ್ಚಿನ ಸಂಶೋಧನೆ ನಡೆಸಬೇಕಾಗಿದೆ. ಇದಾಗದಿದ್ದರೆ ಇಡೀ ದೇಶದಲ್ಲಿರುವ ಆರೋಗ್ಯ ಸೌಲಭ್ಯಗಳು ಮತ್ತು ವಿತರಣಾ ವ್ಯವಸ್ಥೆ ಯಾವುದೇ ಉಪಯೋಗಕ್ಕೆ ಬರುವುದಿಲ್ಲ.

ವೈದ್ಯಕೀಯ ಕಾಲೇಜುಗಳು ಸಂಶೋಧನೆಗೆ ಮಹತ್ವ ನೀಡುವ, ಸದಾ ಸನ್ನದ್ಧವಾಗಿರುವ, ಸ್ವದೇಶಿ ವಿಧಾನಗಳಿಗೆ, ಯೋಜಿತ ಮತ್ತು ಕೌಶಲ್ಯಕ್ಕೆ ಆದ್ಯತೆ ನೀಡುವ ರೀತಿಯಲ್ಲಿ ಪಠ್ಯಕ್ರಮಗಳಲ್ಲಿ ಬದಲಾವಣೆ ಮಾಡಿಕೊಳ್ಳಬೇಕಾಗಿದೆ. ಜೊತೆಗೆ ಮೂಲಭೂತ ಸೌಕರ್ಯ ಕಲ್ಪಿಸುವುದು, ತಂತ್ರಜ್ಞಾನದ ಬಳಕೆ, ಸಂಪನ್ಮೂಲಗಳ ಬಳಕೆ, ಯೋಜಿತ ಕ್ರಮಾವಳಿ, ವೈದ್ಯಕೀಯ ಶಿಷ್ಟಾಚಾರ ಮತ್ತು ಅವುಗಳನ್ನು ಜಾರಿಗೆ ತರುವ ರೀತಿಯ ಕುರಿತು ಚಿಂತಿಸಬೇಕಿದೆ. ಇದಾದಾಗ ಮಾತ್ರ ಸದಾ ಸನ್ನದ್ಧವಾಗಿರುವ ವ್ಯವಸ್ಥೆಯನ್ನು ಹೊಂದಬಹುದು. ಜ್ಞಾನ ಮತ್ತು ಕೌಶಲ್ಯದ ಜೊತೆಗೆ ವಿಶೇಷ ಕೌಶಲ್ಯವನ್ನು ಕಲ್ಪಿಸಿದರೆ ಮಾತ್ರ ತುರ್ತುಪರಿಸ್ಥಿತಿಗಳನ್ನು ಎದುರಿಸಲು ಸಾಧ್ಯ. ಯುವಪೀಳಿಗೆಗೆ ಅತ್ಯಂತ ಅಪಾಯಕಾರಿ ಪರಿಸ್ಥಿತಿಗಳನ್ನು ಎದುರಿಸುವಂತೆ ತರಬೇತಿ ನೀಡಿದಲ್ಲಿ ಮಾತ್ರ ಸೈನ್ಯದ ರೀತಿ ಇಂತಹ ಪರಿಸ್ಥಿತಿಗಳನ್ನು ಎದುರಿಸಲು ಸಾಧ್ಯ.

**(18ನೇ ಪುಟಕ್ಕೆ)**

ವಿಶೇಷ ಲೇಖನ

ಡಾ. ಎನ್. ಕೆ. ವೆಂಕಟರಮಣ

# ಮಾತಿನ ಹುಟ್ಟು ಮತ್ತು ವಿಕಾಸ

ಮಾನವನ ಮಾತನಾಡುವ ಸಾಮರ್ಥ್ಯವು ವಿಕಾಸ ಪ್ರಕ್ರಿಯೆಯಲ್ಲಿ ಸಂಭವಿಸಿದ ಒಂದು ಅನನ್ಯ ವಿದ್ಯಮಾನವಾಗಿದೆ. ಇದೊಂದೇ ಸಾಮರ್ಥ್ಯವು ಮನುಷ್ಯರನ್ನು ಇತರ ಜೀವಿಗಳಿಗಿಂತ ವಿಶೇಷವಾದ ಹಾಗೂ ಮೇಲ್ಮಟ್ಟದ ಜೀವಿಗಳಾಗಿ ಮಾರ್ಪಡಿಸಿದೆ. ಇದರಿಂದಾಗಿ ತನ್ನದೇ ಸಂತತಿಯ ಇತರ ಜೀವಿಗಳೊಡನೆ ಸಂವಹನ ಕೂಡ ಸಾಧ್ಯವಾಗಿದೆ.

ಮನುಷ್ಯನಿಗೆ ಈ ಶಕ್ತಿಯು ಸುಮಾರು ಎಪ್ಪತ್ತು ಸಾವಿರ ವರ್ಷಗಳ ಹಿಂದೆ ಪ್ರಾಪ್ತವಾಗಿರಬೇಕೆಂಬ ಅಂದಾಜಿದೆ. ಅದಕ್ಕೂ ಪೂರ್ವದಲ್ಲಿ ಕೆಲವು ಕೋತಿಗಳ ಪ್ರಭೇದಗಳಲ್ಲಿ ಹಾಗೂ ಚಿಂಪಾಂಜಿಗಳಲ್ಲಿ ಸಂವಹನಕ್ಕೆ ಶಬ್ದವು ಬಳಕೆಯಾಗುತ್ತಿತ್ತು. ಆ ಮೂಲಕ ಅವು ಆಹಾರದ ಅಗತ್ಯಗಳು, ಮಿಲನದ ಬಯಕೆಗಳು ಹಾಗೂ ಅಪಾಯದ ಸುಳಿವುಗಳನ್ನು ಸೂಚಿಸುತ್ತಿದ್ದವು. ಇಷ್ಟಾಗಿಯೂ ಈ ಭಾಗ ಹೇಗೆ ಬೆಳವಣಿಗೆಗೊಂಡಿತು ಎಂಬುದು ಇದುವರೆಗೂ ಸ್ಪಷ್ಟವಾಗಿ ತಿಳಿದುಬಂದಿಲ್ಲ. ಇದಕ್ಕೆ ಸಂಬಂಧಿಸಿದಂತೆ ಹಲವಾರು ಸಿದ್ಧಾಂತಗಳನ್ನು ಪ್ರತಿಪಾದಿಸಲಾಗಿದೆ.

ಮೊದಲಿಗೆ ಶಬ್ದಗಳು ಹುಟ್ಟಿ, ಅದರಿಂದ ಉಚ್ಚಾರ ಘಟಕಗಳು, ಅವುಗಳಿಂದ ಪದಗಳು, ಪದಗಳಿಂದ ವಾಕ್ಯಗಳು, ಹೀಗೆ ಭಾಷೆಯು ವಿಕಸನಗೊಂಡಿದೆ ಎನ್ನಲಾಗಿದೆ. ಒಟ್ಟಾರೆ ಹೇಳುವುದಾದರೆ, ಭಾಷೆಯಲ್ಲಿ ಅರ್ಥಪೂರ್ಣ ವಾಕ್ಯಗಳು ಹೊರಹೊಮ್ಮಲು ಸಾಕಷ್ಟು ದೀರ್ಘಾವಧಿಯೇ ಹಿಡಿದಿದೆ ಎಂಬುದು ತೋರಿಬರುತ್ತದೆ. ಆರಂಭದಲ್ಲಿ ಭಾಷೆಯನ್ನು ಖುಷಿ ಅಥವಾ ನೋವನ್ನು ಹಂಚಿಕೊಳ್ಳಲು ಮಾತ್ರ ಬಳಸಲಾಗುತ್ತಿತ್ತು. ಕಾಲಕ್ರಮೇಣ ಇದೊಂದು ನಡವಳಿಕೆಯಾಯಿತು. ಅದಾದ ಅದೆಷ್ಟೋ ವರ್ಷಗಳ ನಂತರ ವ್ಯಾಕರಣ, ವಾಕ್ಯರಚನೆ, ಕ್ರಮಬದ್ಧ ಉಚ್ಚಾರಣೆ, ವಾಕ್ಯಗಳ ಅರ್ಥಪೂರ್ಣ ರಚನೆ, ವರ್ಣನೆ, ಪದಗುಚ್ಛ ಇವೆಲ್ಲಾ ಭಾಷೆಯ ಘಟಕಗಳಾಗಿ ಬೆಳವಣಿಗೆ ಕಂಡವು.

ಈ ಪ್ರಕ್ರಿಯೆಯಿಂದಾಗಿಯೇ ಭಾಷೆಯ ಹಲವಾರು ಒಳನುಡಿಗಳು (ಉಪಭಾಷೆಗಳು) ಜನ್ಮ ತಳೆದವು. ಸಹಜವಾದ ಮನುಷ್ಯನ ಆವಿಷ್ಕಾರ ಪ್ರವೃತ್ತಿಯಿಂದಾಗಿ ಅಥವಾ ಪೀಳಿಗೆಯಿಂದ ಪೀಳಿಗೆಗೆ ವರ್ಗಾವಣೆಯಲ್ಲಿ ಉಂಟಾಗುವ ವ್ಯತ್ಯಾಸಗಳಿಂದ ವಿಭಿನ್ನ ಭಾಷೆಗಳು ಹಾಗೂ ಒಳನುಡಿಗಳು ಹುಟ್ಟುಪಡೆದವು. ಮತ್ತೊಂದೆಡೆ, ಮನುಷ್ಯರು ದೂರ ಪ್ರದೇಶಗಳಿಗೆ ವಲಸೆ ಹೋದ ಸಂದರ್ಭಗಳಲ್ಲಿ ತಮ್ಮ ಸ್ವಂತ ಸಂಭಾಷಣೆಗಳಿಂದ ದೂರವಾದರು. ಇದರ ಜೊತೆಗೆ, ಆ ಕಾಲಘಟ್ಟದಲ್ಲಿ ದಾಖಲೀಕರಣದ ಕೊರತೆಯಿಂದಾಗಿ, ಪರಿಸ್ಥಿತಿಯ ಒತ್ತಡದಿಂದಾಗಿ ಅಥವಾ ಸಹಜವಾಗಿ ಹಲವಾರು ಮಾರ್ಪಾಡುಗಳು ಸಂಭವಿಸಿದ್ದಿರಬೇಕು.

ಕಾಲ ಕಳೆದಂತೆ ಭಾಷೆ ಎಂಬುದು ಮನುಷ್ಯನ ಭೌಗೋಳಿಕ ವ್ಯಾಪ್ತಿಯ ಹಾಗೂ ವಂಶಾವಳಿಯ ಅನನ್ಯ ಅಂಶವಾಗಿ ಹೊರಹೊಮ್ಮಿತು. ನಂತರದ ಕಾಲಘಟ್ಟದಲ್ಲಿ ಮನುಷ್ಯನು ಮಾತಿನ ಮೂಲಕ ವರ್ಣಿಸುವುದನ್ನು ಹಾಗೂ ಕಥೆ ಕಟ್ಟುವುದನ್ನು ಕಲಿತನು. ಮನುಷ್ಯನ ಕಥೆ ಕಟ್ಟುವ ಈ ಸಾಮರ್ಥ್ಯವು ಭಾಷೆ ಮತ್ತು ವಿಕಸನದ ಪ್ರಕ್ರಿಯೆಯಲ್ಲಿ ಇನ್ನಷ್ಟು ಬದಲಾವಣೆಗೆ ಕಾರಣವಾಯಿತು. ಇದರಿಂದಾಗಿ ಹೆಚ್ಚೆಚ್ಚು ಪದಗಳು ವ್ಯವಸ್ಥಿತವಾಗಿ ಟಂಕಿತಗೊಂಡವು. ನಿಘಂಟುಗಳು ಸಂಕಲನಗೊಂಡು ಭಾಷೆಯ ಸಂವಹನದ ಮೂಲಭೂತ ಮಾರ್ಗವಾದವು. ಸಂವಹನ ಮಾಡಬಲ್ಲ ಹಾಗೂ ಭಾಷೆಯನ್ನು ಪರಿಣಾಮಕಾರಿಯಾಗಿ ಬಳಸಬಲ್ಲ ವ್ಯಕ್ತಿಯ ಸಾಮರ್ಥ್ಯವು ನಾಯಕತ್ವದ ಹೆಗ್ಗುರುತಾಗಿ ಪರಿಣಮಿಸಿತು. ಪರಿಣಾಮಕಾರಿ ಸಂವಹನ ನಡೆಸಬಲ್ಲವರು ನಾಯಕರಾಗಿ ಹಾಗೂ ಬೋಧಕರಾಗಿ ಹೊರಹೊಮ್ಮಿದರು ಹಾಗೂ ಉಳಿದವರು ಅವರ ಅನುಯಾಯಿಗಳಾದರು. ನಂತರ ಕಲಿಕೆಯ ವ್ಯವಸ್ಥಿತ ವಿಧಾನ ರೂಪುಗೊಂಡಿತು.

ಇದೇ ವೇಳೆ, ಮನುಷ್ಯನ ಸಂಶೋಧನೆಯ ಮನೋಪ್ರವೃತ್ತಿ ಅಥವಾ ವಿಶೇಷ ಅಸ್ಮಿತೆಯ ಬಯಕೆಯು ಹಲವಾರು ಭಾಷೆಗಳ ಹಾಗೂ ಉಪಭಾಷೆಗಳ ವಿಕಸನದಲ್ಲಿ ಪಾತ್ರ ವಹಿಸಿರುವ ಸಾಧ್ಯತೆಯೂ ಇದೆ. ಈ ರೀತಿಯಾಗಿ ಭಾಷೆ ಎಂಬುದು




## ಮಿದುಳಿನ ಅಲೆ

– ಡಾ.ಎನ್.ಕೆ. ವೆಂಕಟರಮಣ

### ನೀವು ಎಂದಿಗೂ ಕೇಳಿರದ ಮೆದುಳಿನ ಆಹಾರ



ನೀವು ಕೋಲಿನ್ ಬಗ್ಗೆ ಕೇಳಿರಲಿಕ್ಕಿಲ್ಲ. ಇದು ದೇಹ ಮತ್ತು ಬುದ್ಧಿಶಕ್ತಿಗೆ ಅತ್ಯಗತ್ಯವಾಗಿ ಬೇಕಾಗಿರುವ ಪೋಷಕಾಂಶವಾಗಿದೆ. ಕೋಲಿನ್ 'ಮೆದುಳಿನ ಪ್ರಮುಖ ಆಹಾರ' ಎಂಬುದನ್ನು ಹೊಸ ಸಂಶೋಧನೆಯೊಂದು ತಿಳಿಸಿದೆ. ಇದು ಮೆದುಳಿನ ಕೋಶಗಳ ನಡುವೆ ಸಂಕೇತಗಳನ್ನು ರವಾನಿಸುವ ಪ್ರೋಟೀನ್, ಜ್ಞಾಪಕಶಕ್ತಿ ಮತ್ತು ಮೆದುಳಿನ ಇತರೆ ಕಾರ್ಯಗಳಿಗೆ ಮುಖ್ಯವಾಗಿ ಅಸೆಟೈಲ್ಕೋಲಿನ್ ಅನ್ನು ಸೃಷ್ಟಿಸುತ್ತದೆ ಹಾಗೂ ಬಿಡುಗಡೆಯನ್ನು ತೀವ್ರಗೊಳಿಸುತ್ತದೆ. ಈ ಕುರಿತು ಇತ್ತೀಚೆಗೆ ಎರಡು ಪ್ರಮುಖ ಸಂಶೋಧನೆಗಳು ಹೊರಬಂದಿವೆ. ಮೊದಲನೆಯದಾಗಿ, ಆಹಾರದಲ್ಲಿ ಕೋಲಿನ್ ಅನ್ನು ಸೇರಿಸಿಕೊಂಡಿರುವ ಜನ, ತಮ್ಮ ಜ್ಞಾಪಕಶಕ್ತಿ ಮತ್ತು ಅರಿವಿನ ಸಾಮರ್ಥ್ಯ ಪರೀಕ್ಷೆಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಾರೆ. ಇನ್ನು ಎರಡನೆಯದಾಗಿ, ಹೆಚ್ಚಿನ ಕೋಲಿನ್ ಸೇವನೆಯು ಆರೋಗ್ಯಕರ ಮೆದುಳಿನ ಅಂಗಾಂಶಕ್ಕೆ ಸಂಬಂಧಿಸಿದೆ ಎನ್ನುವುದು ಎಂಆರ್‌ಐ ಸ್ಕ್ಯಾನಿಂಗ್‌ನಿಂದ ತಿಳಿದುಬಂದಿದೆ. ಕೋಲಿನ್ ಉತ್ತಮ ನೈಸರ್ಗಿಕ ಮೂಲಗಳಾದ ಮೊಟ್ಟೆ, ಹಾಲು, ಶೇಂಗಾ ಮತ್ತು ವಿವಿಧ ರೀತಿಯ ಮೀನುಗಳನ್ನು ನಿಮ್ಮ ದೈನಂದಿನ ಆಹಾರವಾಗಿ ಸೇವಿಸುವುದನ್ನು ಮರೆಯಬೇಡಿ.

■ ಕನ್ನಡಕ್ಕೆ: ಬಿ.ಎನ್.ಸುನೀತಾ

ಮನುಷ್ಯ ಸಂತತಿಯ ಪ್ರಮುಖ ಅಸ್ಮಿತೆಯಾಗಿ ಬೆಳೆಯಿತು. ಈ ಭಾಷೆಗಳಿಗೆ ಅಥವಾ ಉಪಭಾಗಗಳಿಗೆ ಲಿಪಿ ಎಂಬುದು ಅಭಿವೃದ್ಧಿಗೊಳ್ಳುತ್ತಿದ್ದಂತೆ ಸಾಹಿತ್ಯವು ಬೆಳೆಯಿತು. ಜೊತೆಗೆ ಮನುಷ್ಯನ ಮಿದುಳು ಹಾಗೂ ಧ್ವನಿಪೆಟ್ಟಿಗೆಯಲ್ಲಿ ಉಂಟಾದ ವಿಕಾಸವು ಆತನಿಗೆ ಮಾತನಾಡುವ ಸಾಮರ್ಥ್ಯ ದಕ್ಕುವಂತೆ ಮಾಡಿತು. ಮನುಷ್ಯರಲ್ಲಿ ಮಾತನಾಡುವುದಕ್ಕೆ ಸಾಧ್ಯವಾಗುವಂತೆ ಈ ಧ್ವನಿಪೆಟ್ಟಿಗೆಯು ವಿಶೇಷವಾದ ರೀತಿಯಲ್ಲಿ ವಿನ್ಯಾಸಗೊಂಡಿದೆ ಎಂಬುದು ಆಸಕ್ತಿಕರ ಸಂಗತಿಯಾಗಿದೆ.

ಎರಡು ವೋಕಲ್ಕಾರ್ಡ್‌ಗಳು ಹಾಗೂ ಅವುಗಳನ್ನು ನಿಯಂತ್ರಿಸಬಲ್ಲ ಹಲವಾರು ಸ್ನಾಯುಗಳ ಸಾಮರ್ಥ್ಯದಿಂದಾಗಿ ಹಲವು ರೀತಿಯ ಧ್ವನಿಗಳನ್ನು ಹೊಮ್ಮಿಸಬಲ್ಲ ಮಾನವರಲ್ಲಿನ ಸಾಮರ್ಥ್ಯವು ಒಂದು ಅನನ್ಯ ಸಂಗತಿಯಾಗಿದೆ. ಈ ಸ್ನಾಯುಗಳು ತುಂಬಾ ನಾಜೂಕು ಹಾಗೂ ಸೂಕ್ಷ್ಮವು ಆಗಿವೆ. ವಿಭಿನ್ನ ಧ್ವನಿಭಾವಗಳು, ಶ್ರುತಿಗಳು ಮತ್ತು ಸ್ಥಾಯಿಗಳಲ್ಲಿ ಧ್ವನಿಯನ್ನು ಹೊಮ್ಮಿಸಬಲ್ಲ ರೀತಿಯಲ್ಲಿ ಈ ಸ್ನಾಯುಗಳಿಗೆ ತರಬೇತಿಯನ್ನು ಕೂಡ ಕೊಡಬಹುದಾಗಿದೆ. ಇಂತಹ ಅಪಾರ ಸಾಮರ್ಥ್ಯದ ಧ್ವನಿಪೆಟ್ಟಿಗೆಯು ಮನುಷ್ಯನ ಉಸಿರಾಟದ ವ್ಯವಸ್ಥೆಯೊಂದಿಗೆ ಜೋಡಣೆಗೊಂಡಿದೆ. ಹೀಗಾಗಿ ಉಸಿರಾಟದ ದೀರ್ಘತೆ, ಆವರ್ತನೆ ಮತ್ತು ನಮೂನೆಗಳ ಮೇಲೆ ನಿಯಂತ್ರಣ ಸಾಧಿಸುವ ಮೂಲಕ ಧ್ವನಿಯ ಏರಿಳಿತ ಸಾಧ್ಯವಾಗುತ್ತದೆ. ಹಯಾಯ್ಡ್ ಮೂಳೆಯ ಆಕಾರ, ಅದು ಇರುವ ಜಾಗ, ಅದಕ್ಕೆ ಹೊಂದಿಕೊಂಡಿರುವ ಸ್ನಾಯುಗಳು, ನಾಲಗೆಯ ಮತ್ತು ಶ್ವಾಸ ಸ್ನಾಯುಗಳ ವಿಕಾಸವು ಮಾತಿನ ಗುಣಮಟ್ಟ ಮತ್ತು ಬೆಳವಣಿಗೆಗೆ ತಮ್ಮದೇ ಕೊಡುಗೆಗಳನ್ನು ನೀಡಿವೆ.

ಇಡೀ ಧ್ವನಿಪಟ್ಟಿಗೆಯನ್ನು ಶೀರ್ಷನಾಳಗಳು ನಿಯಂತ್ರಿಸುತ್ತವೆ. ಈ ನಾಳಗಳಿಗೆ ಗ್ಲಾಸೋಫಾರಿಂಜಿಯಲ್ ಮತ್ತು ವೇಗಸ್ ನರ ಎಂದು ಕರೆಯಲಾಗುತ್ತದೆ. ಈ ಎರಡು ನರಗಳು ಮಿದುಳಿಗೆ ನೇರವಾಗಿ ಸಂಪರ್ಕಗೊಂಡಿವೆ. ಇವು ಮಾತಿನ ನಮೂನೆ ಮತ್ತು ಗುಣಮಟ್ಟವನ್ನು ನಿಯಂತ್ರಿಸುತ್ತವೆ. ಈ ನರಗಳು ಸ್ನಾಯುಗಳ ಸಂಕೀರ್ಣ ಕಾರ್ಯಾಚರಣೆಯ ಸೂಕ್ಷ್ಮಚಲನೆಗಳನ್ನು ನಿಯಂತ್ರಿಸುವ ಜೊತೆಗೆ ಈ ನೆಲೆಗಳಿಂದ ಮಿದುಳಿಗೆ ಸಂವೇದನಾ ಪ್ರತಿಕ್ರಿಯೆಗಳನ್ನು ಲಭ್ಯವಾಗಿಸುತ್ತವೆ. ಈ ನರಗಳು, ಮುಖ್ಯವಾಗಿ ವೇಗಸ್ ನರವು ಅನಿಯಂತ್ರಿತ ನರಮಂಡಲದೊಂದಿಗೆ, ಮಿದುಳು ಕಾಂಡದೊಂದಿಗೆ ಮತ್ತು ಅಡಿಮಸ್ತಿಷ್ಕದೊಂದಿಗೆ ಕೂಡ ಜೋಡಣೆಗೊಂಡಿದೆ. ಈ ರೀತಿಯಾಗಿ ಇವು ಮನಸ್ಸಿನ ಭಾವನಾತ್ಮಕ ಘಟಕವನ್ನು ಮಾತಿನೊಂದಿಗೆ ಸಂಪರ್ಕಗೊಳಿಸುತ್ತವೆ. ಇದರ ಜೊತೆಗೆ ಹೃದಯದ ಕಾರ್ಯಾಚರಣೆ, ಉಸಿರಾಟ ಮತ್ತು ಮುಖದ ಸ್ನಾಯುಗಳೊಂದಿಗಿನ ಸಂಪರ್ಕದಿಂದಾಗಿ ಮಾತು ಹಾಗೂ ಭಾವಾಭಿವ್ಯಕ್ತಿ ಸಾಧ್ಯವಾಗುತ್ತದೆ. ಮಿದುಳು ಮತ್ತು ಮನಸ್ಸಿನ ಸಂಕೀರ್ಣ ವ್ಯವಸ್ಥೆಯಿಂದ ಭಾವನಾತ್ಮಕ ಸ್ಪಂದನಶೀಲತೆ ಚಾಲನೆಗೊಳ್ಳುತ್ತದೆ. ಹಿಂದಿನ ಅನುಭವ ಹಾಗೂ ನೆನಪನ್ನು ಆಧರಿಸಿ ಇದು ಅಡಿಮಸ್ತಿಷ್ಕದ ಮೂಲಕ ಸಾಗುತ್ತದೆ. ಇದರಿಂದಾಗಿ ಮಾತನ್ನು ಏರಿಳಿತಗೊಳಿಸಲು ಹಾಗೂ ಸಂದರ್ಭಕ್ಕೆ ತಕ್ಕಂತೆ ಮಾತನ್ನು ಮಾರ್ಪಡಿಸಲು ಅನುಕೂಲವಾಗುತ್ತದೆ. ಜೊತೆಗೆ, ಮಿದುಳಿನ ಮುಂಭಾಗದ ಹಾಲೆಯಲ್ಲಿ ಹುಟ್ಟುವ ಎಲ್ಲಾ ಭಾವನೆಗಳು ಅಗತ್ಯ ಮಾರ್ಪಾಡುಗಳನ್ನು ಹೊಂದಬಹುದಾಗಿದೆ. ಇವುಗಳ ಪೈಕಿ, ಬಲಮಿದುಳು ಹಾಗೂ ಎಡಮಿದುಳು ಮಾತಿನ ಕಾರ್ಯಾಚರಣೆಯನ್ನು ವಿಭಿನ್ನವಾಗಿ ಪ್ರಭಾವಿಸುತ್ತವೆ. ಎಡಮಿದುಳು ವಿಶ್ಲೇಷಣೆಯಲ್ಲಿ ಮುಂದಿದ್ದು, ಪದಗಳ ಸೂಕ್ತ ಆಯ್ಕೆ, ಸಂಯೋಜನೆ,




ವ್ಯಾಕರಣ ಮತ್ತು ವಾಕ್ಯರಚನೆಗಳನ್ನು ನಿರ್ವಹಿಸುತ್ತದೆ. ಬಲಮಿದುಳು ಪದ ಜೋಡಣೆ, ಧ್ವನಿಭಾವ, ಭಾವನೆಗಳ ಹೊಂದಾಣಿಕೆ ಹಾಗೂ ಮಾತಿಗೆ ವಿಭಿನ್ನ ಭಾವವನ್ನು ಸೃಷ್ಟಿಸುವ ಕಾರ್ಯವನ್ನು ನಿರ್ವಹಿಸುತ್ತದೆ. ಈ ರೀತಿಯಾಗಿ ಮಿದುಳಿನ ಎರಡು ಭಾಗಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸಿ ಮಾತುಗಳನ್ನು ಪರಿಣಾಮಕಾರಿಗೊಳಿಸಿ, ಅದಕ್ಕೆ ಮಾಧುರ್ಯವನ್ನು ತುಂಬುತ್ತವೆ. ಒಟ್ಟಾರೆಯಾಗಿ, ಮಿದುಳಿನ ಬೆಳವಣಿಗೆಯಲ್ಲಿ ಆದ ವಿಕಾಸವೇ ಮನುಷ್ಯನಲ್ಲಿ ಮಾತಿನ ಅಗಾಧ ಸಾಮರ್ಥ್ಯ ಬೆಳೆಯಲು ಕಾರಣ ಎಂಬುದು ಕಂಡುಬರುತ್ತದೆ. ಬಹುತೇಕರಲ್ಲಿ ಮಾತಿನ ನೆಲೆಗಳು ಎಡಮಿದುಳಿನಲ್ಲಿ ಇರುತ್ತವೆ. ಆದ್ದರಿಂದ ಇದನ್ನು 'ಪ್ರಬಲ ಮಿದುಳು' (ಡಾಮಿನೆಂಟ್ ಬ್ರೈನ್) ಎಂದು ಕರೆಯಲಾಗುತ್ತದೆ. ಆಸಕ್ತಿಕರ ವಿಷಯವೆಂದರೆ, ಇದು ವ್ಯಕ್ತಿಯು ಬಲಚನೋ ಅಥವಾ ಎಡಚನೋ ಎಂಬುದಕ್ಕೆ ಸಂಪರ್ಕಿತಗೊಂಡಿರುತ್ತದೆ. ಎಲ್ಲಾ ಬಲಚರಲ್ಲಿ ಮಾತು ಎಡಮಿದುಳಿನೊಂದಿಗೆ ಸಂಪರ್ಕಿತಗೊಂಡಿರುತ್ತದೆ. ಅಲ್ಲದೆ ಬಹುಪಾಲು ಎಡಚರಲ್ಲಿಯೂ ಇದು ಎಡಮಿದುಳಿನಲ್ಲಿಯೇ ನೆಲೆಯಾಗಿರುತ್ತದೆ. ಎಲ್ಲೋ ಕೆಲವು ಎಡಚರಲ್ಲಿ ಮಾತ್ರ ಮಾತಿನ ಕೇಂದ್ರಗಳು ಬಲಮಿದುಳಿನಲ್ಲಿ ನೆಲೆಯಾಗಿರುತ್ತವೆ. ಇದು ಸಾಮಾನ್ಯವಾಗಿ ಕಂಡುಬರುವ ಸಂಗತಿ. ಆದರೆ ಆರಂಭಿಕ ವಯಸ್ಸಿನಲ್ಲಿಯೇ ಎಡಮಿದುಳಿಗೆ ಪೆಟ್ಟು ಬಿದ್ದವರಲ್ಲಿ ಇದು ಬಲಮಿದುಳಿಗೆ ವರ್ಗಾವಣೆಗೊಳ್ಳಬಹುದು. ಮಿದುಳಿನಲ್ಲಿ ಮಾತಿನ ಕೇಂದ್ರಗಳು ಎರಡು ಪ್ರಮುಖ ಜಾಗಗಳಲ್ಲಿ ಅಸ್ತಿತ್ವದಲ್ಲಿವೆ.

ಇವುಗಳ ಪೈಕಿ ಒಂದು, ಮುಂಭಾಗದ ಹಾಲೆಯಲ್ಲಿ 'ಬ್ರೋಕಾಸ್ ಏರಿಯಾ' ಎಂದು ಕರೆಯಲಾಗುವ ನೆಲೆಯಲ್ಲಿ ಇರುತ್ತದೆ. ಇದು ಮಾತನಾಡುವುದಕ್ಕೆ ಕಾರಣವಾದ ನೆಲೆಯಾಗಿರುತ್ತದೆ. ಅಲ್ಲದೆ, ಅಭಿವ್ಯಕ್ತಿ ಪ್ರಕಟಣೆ ಹಾಗೂ ಮಾತು ಹೊರಹೊಮ್ಮಲು ಇದೇ ಕಾರಣ. ಸ್ವೀಕಾರಕ (Receptive) ಮಾತಿನ ನೆಲೆಯು ಕಪಾಲಹಾಲೆಯ 'ವರ್ನಿಕಸ್ ಏರಿಯಾ'ದಲ್ಲಿ ನೆಲೆಯಾಗಿರುತ್ತದೆ. ಇದು ಕಿವಿಯ ಮೂಲಕ ಎಲ್ಲಾ ಬಗೆಯ ಶಬ್ದಗಳನ್ನು ಸ್ವೀಕರಿಸಲು, ವಿಶ್ಲೇಷಿಸಲು ಹಾಗೂ ಸಂಶ್ಲೇಷಿಸಲು ಕಾರಣವಾದ ನೆಲೆಯಾಗಿದೆ. ಈ ಕಾರ್ಯಗಳನ್ನು ನೆರವೇರಿಸಿದ ಬಳಿಕ ಅದನ್ನು ಸೂಕ್ತ ಪ್ರತಿಕ್ರಿಯೆಗಾಗಿ ಬ್ರಾಂಕೋಸ್ ಏರಿಯಾಗೆ ತಲುಪಿಸುತ್ತದೆ. ಕಿವಿಯಿಂದ ಶಬ್ದಗಳು

ಶ್ರವಣನರದ ಮೂಲಕ ಕಪಾಲಹಾಲೆಗೆ ರವಾನೆಗೊಳ್ಳುತ್ತವೆ. ಹೀಗಾಗಿ ಮಾತನ್ನು ಅರ್ಥ ಮಾಡಿಕೊಳ್ಳುವುದು 'ವರ್ಣಿಕಸ್ ನೆಲೆ'ಯನ್ನು ಹಾಗೂ ಅಭಿವ್ಯಕ್ತಿಯನ್ನು ಅರ್ಥೈಸಿಕೊಳ್ಳುವುದು 'ಬ್ರೋಕಾಸ್ ನೆಲೆ'ಯನ್ನು ಅವಲಂಬಿಸಿರುತ್ತದೆ. ಇವೆರಡೂ ನೆಲೆಗಳು 'ಅರ್ಕುಯೇಟ್ ಫ್ಯಾಸಿಕ್ಯುಲಸ್' ಎಂದು ಕರೆಯಲಾಗುವ ಬಿಳಿ ಪದಾರ್ಥದಿಂದ ರೂಪುಗೊಂಡ ವಿಶೇಷ ಕೇಬಲ್ನಿಂದ ಜೋಡಣೆಗೊಂಡಿವೆ. ಈ ಸಂಪರ್ಕ ಕೇಬಲ್ ಈ ಎರಡು ನೆಲೆಗಳನ್ನು ನಿರಂತರವಾಗಿ ಸಂಪರ್ಕದಲ್ಲಿ ಇರಿಸಿರುತ್ತದೆ. ಒಂದೊಮ್ಮೆ ವ್ಯಕ್ತಿಯ ಬ್ರೋಕಾಸ್ ನೆಲೆಗೆ ಹಾನಿಯಾದರೆ ಅಭಿವ್ಯಕ್ತಿ ಸಾಧ್ಯವಾಗುವುದಿಲ್ಲ. ಹಾಗೆಯೇ ವರ್ಣಿಕಸ್ ನೆಲೆಗೆ ಹಾನಿಯಾದರೆ ಅರ್ಥೈಸಿಕೊಳ್ಳುವುದು ಅಸಾಧ್ಯವಾಗುತ್ತದೆ. ಒಂದೊಮ್ಮೆ ಸಂಪರ್ಕ ನರತಂತುಗಳಲ್ಲಿ ನ್ಯೂನತೆಯಿದ್ದರೆ ಅದನ್ನು 'ಕಂಡಕ್ಟಿವ್ ಸ್ಪೀಚ್ ಡಿಫೆಕ್ಟ್' ಎನ್ನಲಾಗುತ್ತದೆ. ಇಂಥವರಿಗೆ ಪದಗಳ ಅಥವಾ ವಾಕ್ಯಗಳ ಪುನರುಚ್ಚಾರ ಸಾಧ್ಯವಾಗುವುದಿಲ್ಲ. ಮಾತನ್ನು ಸ್ಮರಣಶಕ್ತಿಗೆ ಸಂಪರ್ಕಗೊಳಿಸುವ ಹಿಪ್ಪೋಕ್ಯಾಂಪಸ್ ನೆಲೆಗೆ ವರ್ಣಿಕಸ್ ಏರಿಯಾ ಸಂಪರ್ಕಗೊಂಡಿರುತ್ತದೆ. ಹಾಗೆಯೇ ಮುಂಭಾಗದ ಹಾಲೆಯು ಆಲೋಚನೆ ಮತ್ತು ಆಲೋಚನೆಗಳ ಅಭಿವ್ಯಕ್ತಿಗೆ ಕಾರಣವಾಗುವ ನೆಲೆಗಳ ಜೊತೆ ಬೆಸೆದುಕೊಂಡಿರುತ್ತದೆ. ಕಪಾಲಹಾಲೆಯು ಹಳೆಯ ನೆನಪುಗಳನ್ನು ನಿರೂಪಿಸುವ, ಆಕ್ಸಿಪಿಟಲ್ ಹಾಲೆಯು ಕಣ್ಣಿಗೆ ಕಾಣುವ ವಸ್ತುಗಳನ್ನು ವಿವರಿಸುವ ಹಾಗೂ ಪರಿಯೇಟಲ್ ಹಾಲೆಯು ಸೂಕ್ತ ಪದಗಳನ್ನು ಮತ್ತು ಪದಗುಚ್ಛಗಳನ್ನು ಆಯ್ಕೆ ಮಾಡುವ, ಅಂತಿಮವಾಗಿ ಮಾತಿಗೆ ಭಾವನೆಗಳನ್ನು ಜೋಡಣೆಗೊಳಿಸುವ ಲಿಂಬಿಕ್ ವಲಯದೊಂದಿಗೆ ಸಂಪರ್ಕಗೊಂಡಿರುತ್ತದೆ.

ಈ ನೆಲೆಗಳಲ್ಲಿ ಭಾಷೆಯು ಒಂದರ ಮೇಲೊಂದರಂತೆ ಕಡತಗಳ ರೀತಿಯಲ್ಲಿ ಜೋಡಣೆಯಾಗಿರುತ್ತದೆ ಎಂಬುದು ಬೆರಗು ಮೂಡಿಸುವ ಸಂಗತಿಯಾಗಿದೆ. ಮನೆಭಾಷೆಯು ಸಾಮಾನ್ಯವಾಗಿ ಹೆಚ್ಚಿನ ನೆಲೆಯನ್ನು ವ್ಯಾಪಿಸಿಕೊಂಡಿರುತ್ತದೆ. ಉಳಿದ ಭಾಷೆಗಳು ಅದಕ್ಕೆ ಹೊಂದಿಕೊಂಡಂತೆ ಸಂಗ್ರಹಗೊಂಡಿರುತ್ತವೆ. ಕೆಲವೊಮ್ಮೆ ಇವು ಒಂದರ ಮೇಲೆ ಮತ್ತೊಂದು ಸರಿಯುವುದೂ ಕಂಡುಬರುತ್ತದೆ.

ಯಾವ ಭಾಷೆ ಅತ್ಯಂತ ಹೆಚ್ಚು ಬಳಕೆಯಾಗುತ್ತದೋ ಅದು ಮುನ್ನೆಲೆಯಲ್ಲಿ ಕಾರ್ಯಾಚರಣೆ ಮಾಡುತ್ತದೆ. ಈ ಸ್ಮರಣಶಕ್ತಿ ವ್ಯವಸ್ಥೆಯು ತುಂಬಾ ಆಸಕ್ತಿದಾಯಕ ಸಂಗತಿಯಾಗಿದೆ. ಹಾಗೆಯೇ, ಬಹುಭಾಷಿಕರಲ್ಲಿ ಹೇಗೆ ಬೇರೆ ಬೇರೆ ಪದಗಳು ಆಯ್ಕೆಗೊಳ್ಳುತ್ತವೆ ಎಂಬುದು ಅಚ್ಚರಿ ಹುಟ್ಟಿಸುತ್ತದೆ. ವ್ಯಕ್ತಿಯು ಬಹುಭಾಷೆಗಳನ್ನು ಮಾತನಾಡುವುದನ್ನು ಮತ್ತು ಬರೆಯುವುದನ್ನು ಕಲಿಯುವ ಸಾಮರ್ಥ್ಯವು ಈ ಸೂಕ್ಷ್ಮಜಾಲದ ಸಂಪರ್ಕ ಮತ್ತು ಕ್ಷಮತೆಯನ್ನು ಅವಲಂಬಿಸಿರುತ್ತದೆ. ಇದೇ ವ್ಯವಸ್ಥೆಯು ವ್ಯಕ್ತಿಗೆ ಪದಸಂಪತ್ತನ್ನು ಮತ್ತು ನಿರರ್ಗಳ ಮಾತುಗಾರಿಕೆಯನ್ನು ಪ್ರಾಪ್ತವಾಗಿಸುತ್ತದೆ. ಮಾತನಾಡುವ ಭಾಷೆಯ ಪ್ರಾಚೀನತೆಯ ಕುರಿತ ವಿವಿಧ ದೃಷ್ಟಿಕೋನಗಳ ಬಗ್ಗೆ ಇನ್ನೂ ಹೆಚ್ಚಿನ ಸಂಗತಿಗಳು ಸ್ಪಷ್ಟವಾಗಿ ತಿಳಿದುಬಂದಿಲ್ಲ. ಅದೇನೇ ಇರಲಿ, ಇದು ಮಾನವ ಸಂತತಿಯನ್ನು ಇತರ ಪ್ರಭೇದಗಳಿಂದ ಪ್ರತ್ಯೇಕಗೊಳಿಸುವ ನಿರ್ಣಾಯಕ ಗುಣಲಕ್ಷಣವಾಗಿದೆ.

ಮಿದುಳಿನ ಈ ಬ್ರೋಕಾಸ್ ಮತ್ತು ವರ್ಣಿಕಾಸ್ ನೆಲೆಗಳು ಹೋಮೋಹ್ಯಾಬಿಲಿಟೇಶನ್ ಸಂತತಿಯಲ್ಲಿ (ಆಧುನಿಕ ಮಾನವನ ಉಗಮಕ್ಕೆ ಮುನ್ನುಡಿ ಬರೆದ ಪ್ರಭೇದ) ಸುಮಾರು ಇಪ್ಪತ್ತು ಲಕ್ಷ ವರ್ಷಗಳ ಹಿಂದೆ ನೆಲೆಯಾಗಿದ್ದವು ಎಂಬುದು ದೃಢಪಟ್ಟಿದೆ. ಆದರೆ ಮಾತನಾಡುವ ಸಾಮರ್ಥ್ಯದ ಬಗ್ಗೆ ಎತ್ತಿ ತೋರಿಸುವ ಪುರಾವೆ ಮಾತ್ರ ಇದುವರೆಗೆ ಲಭ್ಯವಾಗಿಲ್ಲ. ಭಾಷೆಗಳ ಉಗಮದ ಬಗ್ಗೆ ಸಂಶೋಧನೆ ನಡೆಸುವ ತಜ್ಞರು ಹೇಳುವ ಪ್ರಕಾರ, ಮಾನವರಲ್ಲಿ ಮಾತು ಎಂಬ ಪ್ರಕ್ರಿಯೆಯು ಎರಡು ಲಕ್ಷ ವರ್ಷಗಳಿಂದ ಈಚೆಗೆ ಬೆಳೆದು ಬಂದಿರುವ ಆಧುನಿಕ ವಿದ್ಯಮಾನವಾಗಿದೆ. ಆಧುನಿಕ ಮಾನವನ ಪ್ರಭೇದಗಳು ಹಾಗೂ ಭಾಷೆಯು ಆಫ್ರಿಕಾ ಖಂಡದಲ್ಲಿ ಉಗಮಗೊಂಡಿದೆ ಎಂಬ ಪ್ರತಿಪಾದನೆಗಳು ಕೂಡ ಕೇಳಿಬಂದಿವೆ. ಇದೇ ವೇಳೆ, ಪ್ರಪಂಚದಲ್ಲಿ ಸುಮಾರು ಆರುಸಾವಿರ ಭಾಷೆಗಳಿವೆ ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ.

ಇತ್ತೀಚಿನ ಸಂಶೋಧನೆಗಳು ಮತ್ತು ಕಂಪ್ಯೂಟರ್ ಆಧಾರಿತ ಧ್ವನಿವ್ಯವಸ್ಥೆಗಳ ಪುನರ್ ಸಂರಚನೆಗಳು ನಿಯಾಂಡರ್ಥಾಲ್ಗಳು ಪರಿಣಾಮಕಾರಿ ಸಂವಹನಕ್ಕೆ ಶಬ್ದಗಳನ್ನು ಬಳಸುವ ಸಾಮರ್ಥ್ಯ ಹೊಂದಿದ್ದವು ಎಂಬುದನ್ನು ತೋರಿಸುತ್ತದೆ. ಆದರೆ ಪಳೆಯುಳಿಕೆ ಅಧ್ಯಯನಗಳಿಂದ ಆ ಸಾಮರ್ಥ್ಯದ ವ್ಯಾಪ್ತಿಯನ್ನು ಪತ್ತೆಹಚ್ಚುವುದು ಕಷ್ಟಸಾಧ್ಯ. ಇನ್ನಿತರ ಅಧ್ಯಯನಗಳ ಪ್ರತಿಪಾದನೆಯ ಪ್ರಕಾರ, ಹೋಮೋ ಹೀಡೆಲ್ಬರ್ಗ್ ಇನೋಸಿಸ್ ಸಂತತಿಯ ಶ್ರವಣ ಸಾಮರ್ಥ್ಯವು ಆಧುನಿಕ ಮನುಷ್ಯನ ಶ್ರವಣ ಸಾಮರ್ಥ್ಯವನ್ನೇ ಹೋಲುತ್ತಿತ್ತು ಎನ್ನಲಾಗಿದೆ. ಮಾತನಾಡುವ ಸಾಮರ್ಥ್ಯ ಬೆಳೆಯುವುದಕ್ಕೆ ಕೇಳಿಸಿಕೊಳ್ಳುವುದು ಮುಖ್ಯವಾದ್ದರಿಂದ ಈ ಪ್ರಕ್ರಿಯೆಯು ಬಹುಶಃ ಈ ಅವಧಿಯಲ್ಲಿ ಆರಂಭವಾಗಿರಬೇಕು. ಪ್ರಾಯಶಃ ಭಾಷೆಯು ಮೊದಲು ಸನ್ನೆಗಳೊಂದಿಗೆ ಆರಂಭವಾಗಿ, ನಂತರ ಧ್ವನಿ ಮಾದರಿಗೆ ಬದಲಾಗಿರಬೇಕು. ಈ ಹಿನ್ನೆಲೆಯಲ್ಲಿ ನೋಡಿದರೆ ಮಾತು, ಭಾಷೆ, ಹಾಡು ಮತ್ತು ಗ್ರಹಣ ಶಕ್ತಿ ಒಟ್ಟೊಟ್ಟಿಗೆ ವಿಕಾಸಗೊಂಡಿರಬೇಕು ಎಂದು ತೋರಿಬರುತ್ತದೆ.

## ಕೆಲವು ವಿವರಣೆಗಳ ಪ್ರಕಾರ

ಮೊತ್ತಮೊದಲಿಗೆ ಕೇಳಿಬಂದ ಶಬ್ದ 'ಕ್ಲಿಕ್' ಎನ್ನಲಾಗಿದ್ದು, ಅದರಿಂದ ಮುಂದಿನ ಎಲ್ಲಾ ಯೋಜಿತ, ವ್ಯಾಕರಣಬದ್ಧ ಹಾಗೂ ಆಧುನಿಕ ಸಂವಹನ ವಿಕಸನಗೊಂಡಿತು ಎನ್ನಲಾಗುತ್ತದೆ. ವೇದ ಗ್ರಂಥಗಳ ಪ್ರಕಾರ, ಮೊದಲ ಶಬ್ದವು ದೇವನಾದ ಶಿವನು ಪರಮಾನಂದದಿಂದ ನರ್ತಿಸುವಾಗ ಆತ ಹಿಡಿದಿದ್ದ ಡಮರುಗದಿಂದ ಉದ್ಭವಗೊಂಡಿತು. ಈ ಮೊದಲ ಶಬ್ದವಾದ 'ಓಂ' ಎಂಬುದನ್ನು 'ಪ್ರಣವಂ' ಎಂದೂ ಕರೆಯಲಾಗುತ್ತದೆ. ಇದಾದ ನಂತರ ಹಲವಾರು ಬಗೆಯ ಧ್ವನಿಗಳು ಬೆಳೆದು ಅಂತರಿಕ್ಷದಲ್ಲಿ ಪಸರಿಸಿದವು.

ಋಷಿಮುನಿಗಳು ಆಳವಾದ ಧ್ಯಾನದಲ್ಲಿರುವಾಗ ಇಂತಹ ಧ್ವನಿಗಳನ್ನು ಗುರುತಿಸಿ, ಅವುಗಳನ್ನು ಪದಗಳ ರೂಪಕ್ಕೆ ಹಾಗೂ ಜ್ಞಾನ ಪ್ರಕಾರಕ್ಕೆ ಸಂಯೋಜಿಸಿದರು. ಈ ರೀತಿಯಾಗಿ ತದನಂತರದಲ್ಲಿ 'ಶ್ರುತಿ' ಮತ್ತು 'ಸ್ಮೃತಿ' ಎಂದು ಹೆಸರಾದ ವೇದಗಳು ಹಾಗೂ ಹಲವಾರು ರೀತಿಯ ಆಧ್ಯಾತ್ಮಿಕ ಸಾಹಿತ್ಯಗಳು ಉಗಮಗೊಂಡವು. ಮಾತನಾಡಬಲ್ಲ ಸಾಮರ್ಥ್ಯವು ಎಷ್ಟು ಅನನ್ಯವೋ ಅಷ್ಟೇ ಸಂಕೀರ್ಣವಾದದ್ದು ಕೂಡ. ಈ ಪ್ರಕ್ರಿಯೆಯನ್ನು ಕಾರ್ಯಗತಗೊಳಿಸುವಲ್ಲಿ ಮಿದುಳಿನ ಹಲವಾರು ನೆಲೆಗಳು ಮತ್ತು ಮನಸ್ಸು ಜೊತೆಗೂಡಿ ಕೆಲಸ ಮಾಡುತ್ತವೆ. ಇದರ ಜೊತೆಗೆ, ಕಿರುಮಿದುಳು (ಸೆರಬೆಲಂ) ಮಾತಿನ ಗುಣಮಟ್ಟವನ್ನು ನಿಯಂತ್ರಿಸುತ್ತದೆ. ಹಾಗೆಯೇ, ಈ ಅಂಗಗಳ ಸ್ವಾಸ್ಥ್ಯದ ಮೇಲೆ ದುಷ್ಪರಿಣಾಮ ಬೀರುವ ಹಲವಾರು ಸಮಸ್ಯೆಗಳು ಮಾತಿನ ವೈಖರಿಯಲ್ಲಿ ಬದಲಾವಣೆಗೆ ಎಡೆಮಾಡಿಕೊಡುತ್ತವೆ.

ಸಂಬಂಧಿಸಿದ ನೆಲೆಗಳಿಗೆ ಬೀಳುವ ಪೆಟ್ಟು, ಉಂಟಾಗುವ ಸೋಂಕುಗಳು ಹಾಗೂ ಅಲ್ಲಿ ಬೆಳೆಯುವ ಗೆಡ್ಡೆಗಳು ವಿಭಿನ್ನ ಪ್ರಮಾಣ ದಲ್ಲಿ ಮಾತಿನ ನಿಷ್ಕ್ರಿಯತೆಯನ್ನು ಉಂಟುಮಾಡುತ್ತವೆ. ವಯಸ್ಕರಲ್ಲಿ

ಮಾತನಾಡಲು ತೊಂದರೆ ಉಂಟಾಗುವುದಕ್ಕೆ ಗಾಯಗಳು ಮತ್ತು ಲಕ್ವ ಬಹುಮುಖ್ಯ ಕಾರಣಗಳಾಗಿರುತ್ತವೆ. ಮಾತಿಗೆ ಸಂಪೂರ್ಣ ತೊಂದರೆ ಉಂಟಾದರೆ ಅದನ್ನು 'ಅಫೇಸಿಯಾ' ಎಂದು, ಭಾಗಶಃ ತೊಂದರೆಯಾದರೆ ಅದನ್ನು 'ಡಿಸ್ಫೇಸಿಯಾ' ಎಂದು ಕರೆಯಲಾಗುತ್ತದೆ. ಬ್ರೋಕಾಸ್ ನೆಲೆಯಲ್ಲಿ ನಿಷ್ಕ್ರಿಯತೆಯುಂಟಾದರೆ ಅದು ಮಾತಿನ ಅಭಿವ್ಯಕ್ತಿಯನ್ನು ತ್ರಾಸದಾಯಕಗೊಳಿಸುತ್ತದೆ. ಹಾಗೆಯೇ, ವರ್ನಿಕಾಸ್ ಏರಿಯಾದಲ್ಲಿ ನಿಷ್ಕ್ರಿಯತೆಯು ಗ್ರಾಹ್ಯಶಕ್ತಿಯನ್ನು ವ್ಯತ್ಯಯಗೊಳಿಸುತ್ತದೆ. ಫ್ಯಾಸಿಕ್ಯುಲಸ್ ನಿಷ್ಕ್ರಿಯತೆಯು 'ಕಂಡಕ್ಟಿವ್ ಸ್ಪೀಚ್' ಪ್ರಯಾಸಗಳನ್ನು ತಂದೊಡ್ಡುತ್ತದೆ. ಕಿರುಮಿದುಳಿನಲ್ಲಿನ ನಿಷ್ಕ್ರಿಯತೆಯು ತೊದಲು ಮಾತಿಗೆ ಕಾರಣವಾಗುತ್ತದೆ. ನರಕೋಶಗಳ ಸಾವಿಗೆ ಕಾರಣವಾಗುವ ಪಾರ್ಕಿನ್ಸನ್ಸ್, ಡಿಸ್ಟೋನಿಯಾ ಹಾಗೂ ಮತ್ತಿತರ ಕಾಲಕ್ರಮೇಣ ಉಲ್ಬಣಗೊಳ್ಳುವ ನರಸಂಬಂಧಿ ಅಸ್ವಸ್ಥತೆಗಳು ಕೂಡ ಮಾತಿನ ಸಾಮರ್ಥ್ಯಕ್ಕೆ ಭಂಗ ತರಬಲ್ಲವು. ಹೊರಹೊಮ್ಮುವ ಶಬ್ದವು ಕ್ಷೀಣವಾಗಿದ್ದರೆ ಅದನ್ನು 'ಡಿಸ್ಫೋನಿಯಾ' ಎನ್ನಲಾಗುತ್ತದೆ. ಸಾಮಾನ್ಯವಾಗಿ ಇದು ಧ್ವನಿಪೆಟ್ಟಿಗೆಯಲ್ಲಿನ ಸಮಸ್ಯೆಯಿಂದ ಅಥವಾ ಅದರ ನರಗಳಲ್ಲಿನ ಅಥವಾ ಸ್ನಾಯುಗಳಲ್ಲಿನ ತೊಂದರೆಯಿಂದ ಉಂಟಾಗುತ್ತದೆ. ಇದು ತಾತ್ಕಾಲಿಕವಾಗಿದ್ದಿರಬಹುದು ಅಥವಾ ಶಾಶ್ವತವಾಗಿದ್ದಿರಬಹುದು. ಧ್ವನಿಪೆಟ್ಟಿಗೆಯ ನರಗಳಿಗೆ ಹಾನಿಯಾದರೆ ಅದು ಕರ್ಕಶ ಧ್ವನಿಯನ್ನು ಉಂಟುಮಾಡಬಹುದು ಅಥವಾ ಹೊರಹೊಮ್ಮುವ ಶಬ್ದದ ಪರಿಣಾಮವನ್ನು ಬಾಧಿಸಬಹುದು.

ಒಟ್ಟಾರೆ, ಮಾತನಾಡುವ ಪ್ರತಿಭೆಯು ನಿರಂತರ ತರಬೇತಿ, ಪರಿಶ್ರಮ, ಜ್ಞಾನ ಮತ್ತು ಅಭ್ಯಾಸವನ್ನು ಅಪೇಕ್ಷಿಸುತ್ತದೆ. ಇವುಗಳ ಜೊತೆಗೆ ವ್ಯಕ್ತಿಯು ಪದಸಂಪತ್ತು, ವಾಕ್ಯರಚನೆ ಸಾಮರ್ಥ್ಯ, ಸರಿಯಾದ ಉಚ್ಚಾರಣೆ ಹಾಗೂ ಯುಕ್ತ ಶೈಲಿಯನ್ನು ರೂಢಿಸಿಕೊಳ್ಳಬೇಕಾಗುತ್ತದೆ.

ಹೀಗೆ ಸಾರ್ವಜನಿಕವಾಗಿ ಉತ್ತಮ ಮಾತುಗಾರನಾಗುವುದು ಗಾಯನದಂತೆಯೇ ಒಂದು ಕಲೆಯಾಗಿರುತ್ತದೆ. ಮಗುವಿನಲ್ಲಿ ಅಥವಾ ವಯಸ್ಕರಲ್ಲಿ ಮಾತನಾಡಲು ಸಮಸ್ಯೆ ಎದುರಾದಾಗ ಎಲ್ಲಾ ನೆಲೆಗಳ ಕಾರ್ಯಾಚರಣೆಗಳ ಬಗ್ಗೆ ಗಮನಹರಿಸಿ ರೋಗ ಪ್ರಕಾರವನ್ನು ದೃಢೀಕರಣ ಮಾಡಿಕೊಳ್ಳಬೇಕಾಗುತ್ತದೆ.

ವಯಸ್ಕರಿಗೆ ಮಾತಿನಲ್ಲಿ ನಿಷ್ಕ್ರಿಯತೆಯಾದರೆ ಅದು ವ್ಯಕ್ತಿಯನ್ನು ಒಂದು ರೀತಿ ಅಂಗಊನತೆಯಂತೆ ಬಾಧಿಸುತ್ತದೆ. ಹಾಗೆಯೇ ಮಕ್ಕಳಲ್ಲಿ ಸಮಸ್ಯೆ ಕಂಡು ಬಂದಾಗ ಪೋಷಕರು ಚಿಂತೆಗೀಡಾಗುತ್ತಾರೆ.ಒಮ್ಮೆ ರೋಗ ದೃಢೀಕರಣ ಆಗುತ್ತಿದ್ದಂತೆ ಅಂತರ್ಗತ ಕಾರಣಕ್ಕೆ ಚಿಕಿತ್ಸೆಯನ್ನು ಮತ್ತು ಮಾತಿನ ಕ್ಷಮತೆ ಹೆಚ್ಚಿಸಲು ಥೆರಪಿಯನ್ನು ಒಟ್ಟೊಟ್ಟಿಗೆ ನಿರ್ವಹಿಸಬೇಕಾಗುತ್ತದೆ. ಮಾತಿನ ಥೆರಪಿಯನ್ನು ಎಷ್ಟು ಸಾಧ್ಯವೋ ಅಷ್ಟು ಬೇಗ ಆರಂಭಿಸಿದರೆ ಒಳ್ಳೆಯದು. ಇದರಿಂದ ವ್ಯಕ್ತಿಯ ಉಚ್ಚಾರಣೆ, ಗ್ರಹಣ ಸಾಮರ್ಥ್ಯ ಇತ್ಯಾದಿಗಳನ್ನು ಹೆಚ್ಚಿನ ಮಟ್ಟದಲ್ಲಿ ಉಳಿಸಿಕೊಳ್ಳಬಹುದಾಗಿರುತ್ತದೆ. ಕಾಲಕ್ರಮೇಣ ಇದು ಬಾಧಿತ ವ್ಯಕ್ತಿಯ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಇದರ ಜೊತೆಗೆ ಒಳ್ಳೆಯ ಫಲಿತಾಂಶ ಬರಬೇಕೆಂದರೆ ವ್ಯಕ್ತಿಗತ ಪ್ರಯತ್ನವು ಕಡ್ಡಾಯವಾಗಿರುತ್ತದೆ.

## ಮಾತಿನ ಥೆರಪಿ ವಿಭಾಗ

ಈ ಮೇಲೆ ತಿಳಿಸಲಾದ ಸಮಸ್ಯೆಗಳನ್ನು ಸಮಗ್ರವಾಗಿ ನಿರ್ವಹಿಸಲು 'ಬ್ರೈನ್ಸ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ'ಯಲ್ಲಿ ಸುಸಜ್ಜಿತವಾದ ಸ್ಪೀಚ್ ಥೆರಪಿ ಮತ್ತು ಪುನಶ್ಚೇತನ ವಿಭಾಗ ಕಾರ್ಯ ನಿರ್ವಹಿಸುತ್ತಿದೆ. ಹಲವಾರು ಬಗೆಯ ಅಸ್ವಸ್ಥತೆಗಳಿಗೆ ಆಯಾ ವ್ಯಕ್ತಿಯ ಅಗತ್ಯಕ್ಕೆ ತಕ್ಕಂತೆ ಚಿಕಿತ್ಸೆ ನೀಡಲು ಇಲ್ಲಿ ವ್ಯವಸ್ಥೆ ಇದೆ. ತಪಾಸಣೆ, ರೋಗ ದೃಢೀಕರಣ, ವೈಯಕ್ತಿಕ ತರಬೇತಿ ಹಾಗೂ ನಿಗಾ ವಹಿಸುವಿಕೆ, ಆಹಾರ ನುಂಗಲು ತರಬೇತಿ ಇತ್ಯಾದಿಯನ್ನು ಬಾಧಿತ ವ್ಯಕ್ತಿಯು ಸ್ವತಂತ್ರನಾಗುವ ತನಕ ಹಾಗೂ ಆತನಿಗೆ ಆತ್ಮವಿಶ್ವಾಸ ಮೂಡುವ ತನಕ ನೀಡಲಾಗುತ್ತದೆ.

■ ಕನ್ನಡಕ್ಕೆ: belaguli.venkata@gmail.com

*A book titled*

***Brain Attack- Facts & Realities***




authored by renowned Neurosurgeon, Founder Chairman & Director Neurosciences, Brains Hospitals, **Dr. N K Venkataramana,** is now available for sale. This book is one of its kind providing comprehensive information about stroke, brain hemorrhage, venous stroke and all associated emergencies in a simple format understandable to people of all walks of life. Enjoy reading and empower yourself with knowledge to help the society. The book priced at Rs. 225 is now available on Amazon.

**ಡಾ. ಎನ್.ಕೆ. ವೆಂಕಟರಮಣ ಅವರ**

**ಮಿದುಳಿನ ಆಘಾತ ವಾಸ್ತವಾಂಶಗಳು**




ಗ್ರಂಥ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಸಿದ್ಧವಾಗಿ ಮಾರುಕಟ್ಟೆಯಲ್ಲಿದೆ. ಕನ್ನಡ ಪುಸ್ತಕವನ್ನು ಬೆಂಗಳೂರಿನಲ್ಲಿರುವ ಖ್ಯಾತ ಪ್ರಕಾಶಕರಾದ ಸಪ್ನ ಬುಕ್ ಹೌಸ್, ಇವರು ಪ್ರಕಟಿಸಿದ್ದಾರೆ. ಮುಖಬೆಲೆ 195. ಪುಟಗಳು 225. ಇಂಗ್ಲಿಷ್ ಆವೃತ್ತಿಯನ್ನು ಬ್ರೈನ್ಸ್ ಆಸ್ಪತ್ರೆ ಇವರು ಪ್ರಕಟಿಸಿದ್ದು ಬೆಲೆ 225. ಎಂಟು ಪುಟಗಳ ವರ್ಣಚಿತ್ರವಿದೆ. ಎಲ್ಲಾ ಪುಟದಲ್ಲೂ ಆಯಾಯ ವಿಷಯಕ್ಕೆ ತಕ್ಕಂತೆ ಕಪ್ಪು-ಬಿಳುಪು ಚಿತ್ರಗಳಿವೆ. 'ಲಕ್ವ' 'ಪಾರ್ಶ್ವವಾಯು' 'ಸ್ಟ್ರೋಕ್ ' ಮುಂತಾದ ಹೆಸರುಗಳಿಂದ ಕರೆಯುವ ಈ ಭಯಂಕರ ಕಾಯಿಲೆಯ ಬಗ್ಗೆ ತಿಳಿಯಲು, ಅದರಿಂದ ದೂರವಿರಲು ಹಾಗೂ ಈಗಾಗಲೇ ಬಾಧಿತರಾದವರನ್ನು ರಕ್ಷಿಸಲು ಈ ಗ್ರಂಥ ಅತ್ಯಂತ ಉಪಯುಕ್ತವಾಗಿದೆ. ಇದರ ಪ್ರತಿಗಳು ಅಮೆಜಾನ್‌ನಲ್ಲೂ ದೊರೆಯುತ್ತದೆ.



ನಿಮ್ಮ ಮಿದುಳು ನಿಮಗೆಷ್ಟು ಗೊತ್ತು?

ಡಾ. ಎನ್. ಕೆ. ವೆಂಕಟರಮಣ

# ಹೈಪೋಥಾಲಮಸ್
# Hypothalamus

ಹೈಪೋಥಾಲಮಸ್ ಮೆದುಳಿನ ಅತ್ಯಂತ ಪ್ರಮುಖ ಅಂಗವಾಗಿದ್ದು, ಹಲವಾರು ನ್ಯೂಕ್ಲಿಐಗಳ ಗುಂಪಾಗಿದೆ. ದೇಹದ ವಿವಿಧ ಭಾಗಗಳು ಹೇಗೆ ಕೆಲಸ ಮಾಡಬೇಕು ಎಂದು ನಿರ್ದೇಶನ ನೀಡುವ ಕಾರ್ಯ ಮಾಡುತ್ತದೆ. ಹೈಪೋಥಾಲಮಸ್ ಡೈನೆಸೆಫಲಾನ್ನ ಪ್ರಮುಖ ಭಾಗಗಳಲ್ಲಿ ಒಂದಾಗಿದೆ. ಥಾಲಮಸ್ ಎಂದು ಕರೆಯಲಾಗುವ ಕೇಂದ್ರದಿಂದ ಸ್ವಲ್ಪ ಕೆಳಗಡೆ ಇರುತ್ತದೆ. ಇವೆರಡನ್ನೂ ವಿಭಾಗಿಸುವ ಅಂಗವನ್ನು ಹೈಪೋಥಾಲಮಿಕ್ ಸಲ್ಕಸ್ (Hypothalamic sulcus) ಎಂದು ಕರೆಯಾಗುತ್ತದೆ. ಹೈಪೋಥಾಲಮಸ್ನ ನ್ಯೂಕ್ಲಿಐಗಳು (Nuclei of Hypothalamus) ಒಂದು ಪ್ರದೇಶದ ಸುತ್ತ ಹರಡಿರುತ್ತವೆ. ಕಾರ್ಪಸ್ ಕಾಲೋಸಮ್ ಮತ್ತು ಲಮೀನಾ ಟರ್ಮಿನಲಿಸ್ ಸಂಪರ್ಕಿಸುವ ತೆಳು ಒಳಚರ್ಮ ಹೈಪೋಥಾಲಮಸ್ನ ಮುಂಬದಿಯಲ್ಲಿರುತ್ತದೆ. ಇದರ ಮೇಲ್ಭಾಗದಲ್ಲಿ ಥಾಲಮಸ್ ಇದ್ದರೆ, ಕೆಳಭಾಗದಲ್ಲಿ ಹೆಬಿನುಲಿಯರ್ ನ್ಯೂಕ್ಲಿಐ ಮತ್ತು ಪೀನಲ್ ಗ್ರಂಥಿಯನ್ನು ಹೊಂದಿರುವ ಎಪಿಥಾಲಮಸ್ (Epithalamus) ಇರುತ್ತದೆ.

ಇದರ ಕೆಳಗೆ ಇನ್ನೂ ಹಲವಾರು ಅಂಗಗಳು ಇದ್ದರೂ ಮ್ಯಾಮಿಲಿಯರಿಗಳು ಮಾತ್ರ ಹೆಚ್ಚು ಪರಿಚಿತವಾಗಿವೆ. ನ್ಯೂಕ್ಲಿಐ ಸೆಪ್ಟಮ್, ಆಪ್ಟಿಕ್ ಚಿಯಾಸ್ಮ್ ಪ್ರದೇಶದ ಜೊತೆಗೆ ಎಪಿಥಾಲಮಸ್ ಇದರ ಕೆಳಗೆ ಇರುತ್ತದೆ. ಮುಂಭಾಗದಲ್ಲಿ ಪಿಟ್ಯುಟರಿ ಗ್ರಂಥಿ ಇರುತ್ತದೆ. ಹೈಪೋಥಾಲಮಸ್ನಿಂದ ಪಿಟ್ಯುಟರಿ ಗ್ರಂಥಿಯ ನಡುವೆ ಹಲವಾರು ನರವ್ಯೂಹಗಳಿದ್ದು ಇವುಗಳನ್ನು ಟ್ಯೂಬರ್ ಸಿನೆರೆಯಂ (Tuber Cinerium) ಎಂದು ಕರೆಯಲಾಗುತ್ತದೆ. ಇನ್ಫಂಡಿಬುಲಮ್ (Infundibulum) ಎಂದು ಕರೆಯಲಾಗುವ ಅತ್ಯಂತ ಕೂದಲಿ ನಂತಹ ರಚನೆಗಳಿದ್ದು, ಇದು ಪಿಟ್ಯುಟರಿ ಗ್ರಂಥಿಯನ್ನು ಸಂಪರ್ಕಿಸುತ್ತದೆ. ಈ ನ್ಯೂಕ್ಲಿಐಗಳು ಮೆದುಳಿನ ಇತರ ಭಾಗಗಳು ಮತ್ತು ದೇಹದ ಹಲವು ಭಾಗಗಳಲ್ಲಿ ಹರಡಿದ್ದು ಚಯಾಪಚಯ, ಹಾರ್ಮೋನ್‌ಗಳ ಬಿಡುಗಡೆ, ಭಾವನೆಗಳು ಮತ್ತು ವರ್ತನೆಗಳನ್ನು ನಿಯಂತ್ರಿಸುತ್ತವೆ. ಹೈಪೋಥಾಲಮಸ್ನಲ್ಲಿಯೇ ಇವುಗಳನ್ನು ಎರಡು ಭಾಗಗಳಾಗಿ ವಿಭಜಿಸಲಾಗಿದ್ದು ಮಧ್ಯ ಗುಂಪು ಮತ್ತು ಕೊನೆಯ ಗುಂಪುಗಳು ಎಂದು ವಿಭಾಗಿಸಲಾಗಿದೆ. ಕೊನೆಯ ಗುಂಪನ್ನು ಲೇಟರಲ್ ಹೈಪೋಥಾಲಮಿಕ್ ನ್ಯೂಕ್ಲಿಯಸ್ (Lateral Hypothalamic Nucleus) ಎಂದು ಕರೆಯಲಾಗುತ್ತದೆ. ಕೊನೆಯ ಭಾಗ ಮತ್ತು ಮಧ್ಯ ಭಾಗದ ನಡುವೆ ತೆಳ್ಳಗಿನ ಪದರ ಪ್ರತ್ಯೇಕಿಸುತ್ತದೆ.

ಮಧ್ಯದ ಗುಂಪು ಹಲವಾರು ಪ್ರಮುಖ ನ್ಯೂಕ್ಲಿಐಗಳನ್ನು ಹೊಂದಿದೆ. ಮುಂಭಾಗವನ್ನು ಪ್ರೀ–ಆಪ್ಟಿಕ್ ವಲಯ ಎಂದು ಕರೆಯಲಾಗುತ್ತಿದ್ದು, ಇದು ಅತ್ಯಂತ ದೊಡ್ಡದಾದ ಪ್ರೀ–ಆಪ್ಟಿಕ್ ನ್ಯೂಕ್ಲಿಯಸ್ನು ಹೊಂದಿದೆ. ಇದರ ಹಿಂಭಾಗದಲ್ಲಿಯೇ ಸುಪ್ರಾಆಪ್ಟಿಕ್ ವಲಯವಿದೆ. ಸುಪ್ರಾ ಚಿಯಾಸ್ಮಿಟಿಕ್ ನ್ಯೂಕ್ಲಿಯಸ್, ಸುಪ್ರಾ ಆಪ್ಟಿಕ್ ನ್ಯೂಕ್ಲಿಯಸ್ ಮತ್ತು ಅದರ ಮೇಲ್ಭಾಗದಲ್ಲಿ ಪ್ಯಾರಾ ವೆಂಟ್ರಿಕ್ಯುಲರ್ ನ್ಯೂಕ್ಲಿಯಸ್ ಇರುತ್ತವೆ. ಇದರ ಜೊತೆಗೆ ಆಂಟಿರಿಯರ್ ಹೈಪೋಥಾಲಮಿಕ್ ನ್ಯೂಕ್ಲಿಐ (Anterior Hypothalamic Nuclei) ಕೂಡ ಇಲ್ಲಿ ಇರುತ್ತದೆ. ಹೀಗಾಗಿ ಇದನ್ನು ಅತ್ಯಂತ ಮಹತ್ವದ ಅಂಗವಾಗಿ ಪರಿಗಣಿಸಲಾಗುತ್ತದೆ. ಇದರ ಹಿಂಭಾಗದಲ್ಲಿ ಟ್ಯೂಬರಲ್ ವಲಯವಿದೆ. ಇಲ್ಲಿ ಅತ್ಯಂತ ದೊಡ್ಡದಾದ ಆರ್ಕುಯೇಟ್ ನ್ಯೂಕ್ಲಿಯಸ್, ವೆಂಟ್ರಲ್ ಮೀಡಿಯಲ್ ನ್ಯೂಕ್ಲಿಯಸ್ ಮತ್ತು ಡೋರ್ಸಲ್ ಮೀಡಿಯಲ್ ನ್ಯೂಕ್ಲಿಯಸ್ ಇರುತ್ತವೆ. ಎಲ್ಲದಕ್ಕೂ ಕೊನೆಯಲ್ಲಿ ಮ್ಯಾಮಿಲಿಯರ್ ವಲಯವಿದೆ. ಇದು ಮ್ಯಾಮಿಲಿಯರ್ ನ್ಯೂಕ್ಲಿಐ ಮತ್ತು ಪಾಸ್ಟಿಯರ್ ಹೈಪೋಥಾಲಮಿಕ್ ನ್ಯೂಕ್ಲಿಯಸ್ ಅನ್ನು ಹೊಂದಿದೆ. ಅತ್ಯಂತ ದೊಡ್ಡದಾದ ಲ್ಯಾಟರಲ್ ಹೈಪೋಥಾಲಮಿಕ್ ನ್ಯೂಕ್ಲಿಯಸ್ ಮುಂಭಾಗದಿಂದ ಹಿಂಭಾಗದವರೆಗೆ ಹರಡಿರುತ್ತದೆ. ಹೈಪೋಥಾಲಮಸ್ ಎಂಡೋಕ್ರೀನ್ ಪ್ರಕ್ರಿಯೆಯ ಹಿಂದಿನ ನಿಯಂತ್ರಕ ವಾಗಿರುತ್ತದೆ. ಅಂಗಾಂಗ ಚಲನೆಯ ನಿಯಂತ್ರಣ ಮಾಡುವ ಜೊತೆಗೆ ಸ್ವಯಂಚಾಲಿತ ನರ ವ್ಯವಸ್ಥೆಯನ್ನು ಹೈಪೋಥಾಲಮಸ್ ನಿಯಂತ್ರಿಸುತ್ತದೆ.




## ಅಂಗಾಂಗ ಪ್ರಕ್ರಿಯೆ (Limbic functions)

ಭಾವನೆಗಳನ್ನು ನಿಯಂತ್ರಿಸುವ ಮೆದುಳಿನ ಭಾಗ ಇದರ ಜೊತೆಗೆ ವರ್ತನೆಗಳನ್ನು, ಅದರಲ್ಲೂ ಪಚನಕ್ರಿಯೆ, ಲೈಂಗಿಕತೆ ಮತ್ತು ಸಾಮಾಜಿಕ ವರ್ತನೆಗಳನ್ನು ನಿಯಂತ್ರಿಸುತ್ತದೆ. ಇದರ ಜೊತೆಗೆ ಕಲಿಕೆ ಮತ್ತು ಜ್ಞಾಪಕಶಕ್ತಿಯನ್ನು ಸಹ ಹೈಪೋಥಾಲಮಸ್ ನಿರ್ವಹಿಸುತ್ತದೆ. ಮ್ಯಾಮಿಲರಿ ಅಂಗಗಳು ಕಾಲಕ್ಕೆ ತಕ್ಕಂತೆ ನೆನಪುಗಳನ್ನು ನಿಯಂತ್ರಿಸುವ ಜೊತೆಗೆ ವಾಸನೆಯನ್ನು ಕಂಡು ಹಿಡಿಯುವ ಕೆಲಸ ಮಾಡುತ್ತವೆ. ಪ್ಯಾಪೆಜ್ ಸರ್ಕ್ಯೂಟ್ನ ಅತ್ಯಂತ ಪ್ರಮುಖ ಭಾಗವಾಗಿ ಮ್ಯಾಮಿಲರಿ ಕಾರ್ಯ ನಿರ್ವಹಿಸುತ್ತದೆ. ಅಮಿಗದಲ (Amygdala) ಜೊತೆ ಸೇರಿಕೊಂಡು ಇದು ಭಾವನೆಗಳನ್ನು ನಿಯಂತ್ರಿಸುವ ಮೆದುಳಿನ ಅತ್ಯಂತ ಪ್ರಮುಖವಾಗಿದೆ.

ಉದ್ವೇಗ, ಭಯ, ದುಃಖ ಮತ್ತು ಆಕ್ರಮಣಕಾರಿ ಭಾವನೆಗಳನ್ನು ಇದು ನಿಯಂತ್ರಿಸುತ್ತದೆ. ಇದು ಮೆದುಳಿನ ಮುಂಭಾಗದ ಕವಚಕ್ಕೆ ಸಂಪರ್ಕ ಹೊಂದಿದ್ದು, ಸಮಯಕ್ಕೆ ತಕ್ಕ ಚಿಂತನೆ ಮತ್ತು ವರ್ತನೆಯ ಬದಲಾವಣೆಗಳನ್ನು ನಿಯಂತ್ರಿಸುತ್ತದೆ. ಆರ್ಕುಯೇಟ್ ನ್ಯೂಕ್ಲಿಐ (Arcuate Nuclei) ವೆಂಟಿಯೋ ಮೀಡಿಯಲ್ ನ್ಯೂಕ್ಲಿಯಸ್ (Venteo Medial Nucleus) ಜೊತೆ ನಿಕಟ ಸಂಬಂಧ ಹೊಂದಿದ್ದು ಕಾರ್ಟಿಕಾರ್ಟೋಫಿನ್ ಹಾರ್ಮೋನ್ (Cortico Trophin) ಬಿಡುಗಡೆ ಮಾಡುವ ಮೂಲಕ ತೃಪ್ತಿಕರ ಭಾವನೆಯನ್ನು ಮೂಡಿಸುತ್ತದೆ ಮತ್ತು 'ಲೇಟರಲ್ ಹೈಪೋಥಾಲಮಿಕ್ ನ್ಯೂಕ್ಲಿಯಸ್' ಒರೆಕ್ಸಿನ್‌ಗಳನ್ನು (Lateral Hypothalamic Nucleus) ಬಿಡುಗಡೆ ಮಾಡುವ ಮೂಲಕ ಪಚನಕ್ರಿಯೆಯನ್ನು (ಊಟ–ಹಸಿವು) ನಿಯಂತ್ರಿಸುತ್ತದೆ. ಕೊಬ್ಬಿನ ಅಂಶದ ಉತ್ಪಾದನೆ, ಮೇದೋಜೀರಕ ಗ್ರಂಥಿ ಇನ್ಸುಲಿನ್ ಬಿಡುಗಡೆ ಮಾಡಲು ಮತ್ತು ವೇಗಲ್ ನರವ್ಯೂಹ ಹೊಟ್ಟೆಯ ಹಿಗ್ಗುವಿಕೆ ಮೂಲಕ ತೃಪ್ತಿಕರ ಭಾವನೆಯು ಹೊರಹೊಮ್ಮಲು ಹೈಪೋಥಾಲಮಸ್ ಭಾಗವನ್ನು ಪ್ರಚೋದಿಸುತ್ತದೆ. ಇದಕ್ಕೆ ಪ್ರತಿಯಾಗಿ ಗ್ರೆಲಿನ್ (Grelin) ಉತ್ಪತ್ತಿಯಾದರೆ ಹಸಿವಿನ ಭಾವನೆ ಬರಲು ಕಾರಣವಾಗುತ್ತದೆ. ಪರಿಸ್ಥಿತಿಗೆ ಅನುಗುಣವಾಗಿ ಈ ಪ್ರಕ್ರಿಯೆಗಳು ಸದಾ ಚಾಲ್ತಿಯಲ್ಲಿರುತ್ತವೆ. ಮೆದುಳಿನ ಈ ಯಾವುದೇ ಪ್ರಮುಖ ಭಾಗಗಳಿಗೆ ಹಾನಿಯಾದರೆ ವ್ಯಕ್ತಿಯ ವರ್ತನೆಯಲ್ಲಿ ಭಾರಿ ಪರಿಣಾಮ ಬೀರುತ್ತದೆ. ಆದರೂ ಕೆಲವು ಅಂಗಗಳು ಸ್ವಯಂ ನಿಯಂತ್ರಣ ಮಾಡಿಕೊಳ್ಳುವ ಶಕ್ತಿಯನ್ನು ಹೊಂದಿವೆ. ಹಿಪ್ಪೋಕ್ಯಾಂಪಸ್ ಮತ್ತು ಹೈಪೋಥಾಲಮಸ್ ನೆನಪಿನ ಶಕ್ತಿಯ ಜೊತೆಗೆ ಸಂಬಂಧ ಹೊಂದಿವೆ. ಮೆದುಳಿನ ಮುಂಭಾಗದಲ್ಲಿರುವ ನರವ್ಯೂಹ ರೆಟಿಕ್ಯುಲರ್ ಆ್ಯಕ್ಟಿವೇಷನ್ ಸಿಸ್ಟಮ್, ಹೈಪೋಥಾಲಮಸ್ ಮತ್ತು ಕಾರ್ಟೆಕ್ಸ್‌ಗಳನ್ನು ಜೋಡಿಸುತ್ತದೆ.

## ದೇಹದಲ್ಲಿರುವ ಎಂಡೋಕ್ರೀನ್ ವ್ಯವಸ್ಥೆ (Endocrine System of the Body)

ಎಂಡೋಕ್ರೀನ್ ವ್ಯವಸ್ಥೆ ದೇಹದ ಅತ್ಯಂತ ಪ್ರಮುಖ ಭಾಗವಾಗಿದ್ದು, ಜೀವನಪೂರ್ತಿ ಚಯಾಪಚಯ ಕ್ರಿಯೆಗಳು ನಡೆಯಲು ಸಹಾಯಕವಾಗಿದೆ. ಇದರಲ್ಲಿ ಅತ್ಯಂತ ಪ್ರಮುಖವಾದ ಅಂಗ ಎಂದರೆ ಆರ್ಕುಯೇಟ್ ನ್ಯೂಕ್ಲಿಯಸ್. (Arcuate nucleus) ಈ ನ್ಯೂಕ್ಲಿಯಸ್ ತನಗಿರುವ ಇತರ ಸಂಪರ್ಕವನ್ನು ಬಳಸಿಕೊಂಡು ದೇಹದಲ್ಲಿ ಹಾರ್ಮೋನ್‌ಗಳನ್ನು ಬಿಡುಗಡೆ ಮಾಡುವ ಕೆಲಸ ಮಾಡುತ್ತದೆ. ಇದನ್ನು ಪೋರ್ಟಲ್ ಸಿಸ್ಟಮ್ ಎಂದು ಕರೆಯಲಾಗುತ್ತದೆ. ಪೋರ್ಟಲ್ ಸಿಸ್ಟಮ್ ಹಲವಾರು ರಕ್ತನಾಳಗಳನ್ನು ಹೊಂದಿರುವ ವ್ಯವಸ್ಥೆಯಾಗಿದ್ದು, ಪಿಟ್ಯುಟರಿ ಗ್ರಂಥಿಗೆ ಅಗತ್ಯವಿರುವ ಜೀವರಾಸಾಯನಿಕ ಪದಾರ್ಥಗಳನ್ನು ಪೂರೈಸುವ ಕಾರ್ಯವನ್ನು ಮಾಡುತ್ತದೆ. ಈ ಜೀವರಾಸಾಯನಿಕಗಳು ಪಿಟ್ಯುಟರಿ ಗ್ರಂಥಿಗೆ ಅವಶ್ಯಕ ಹಾರ್ಮೋನ್‌ಗಳು ರಕ್ತದಲ್ಲಿ ಬಿಡುಗಡೆಯಾಗಲು ನೆರವಾಗುತ್ತವೆ. ಈ ಹಾರ್ಮೋನ್‌ಗಳು ದೇಹದ ನಿರ್ದಿಷ್ಟ ಭಾಗಗಳಿಗೆ ತೆರಳಿ ತಾವು ಮಾಡಬೇಕಿರುವ ಕಾರ್ಯವನ್ನು ಮಾಡಲು ನೆರವಾಗುತ್ತವೆ. ಪ್ರೊಲ್ಯಾಕ್ಟಿನ್ (Prolactin) ಹೊರತುಪಡಿಸಿ ಪಿಟ್ಯುಟರಿಗ್ರಂಥಿಯಲ್ಲಿ ಬಿಡುಗಡೆಯಾಗುವ ಬಹುತೇಕ ಹಾರ್ಮೋನ್‌ಗಳು ಮೆದುಳಿನಲ್ಲಿ ನಡೆಯುವ ಕಾರ್ಯಗಳಿಂದ ಪ್ರೇರಿತವಾಗಿರುತ್ತವೆ. ಪ್ರೊಲ್ಯಾಕ್ಟಿನ್ ಮಾತ್ರ ಹೈಪೋಥಾಲಮಸ್ ನಿಯಂತ್ರಣದಲ್ಲಿರುತ್ತದೆ. ಇದು ಸಹ ಪೋರ್ಟಲ್ ಸಿಸ್ಟಮ್ನ ಭಾಗವೇ ಆಗಿದ್ದು, ರಕ್ತದಲ್ಲಿ ಯಾವ ಹಾರ್ಮೋನ್ ಎಷ್ಟು ಪ್ರಮಾಣದಲ್ಲಿದೆ ಎಂಬ ಕುರಿತು ನಿಗಾ ಇಟ್ಟಿರುತ್ತದೆ. ಹಾರ್ಮೋನ್‌ಗಳ ಬಿಡುಗಡೆ ವ್ಯವಸ್ಥೆ ಇದರ ಆಧಾರದ ಮೇಲೆ ಅವಲಂಬಿತವಾಗುವ ಜೊತೆಗೆ ಬೇಡಿಕೆ ಮತ್ತು ಪೂರೈಕೆಯ ಜೊತೆಗೂ ಸಂಬಂಧ ಹೊಂದಿರುತ್ತದೆ. ಹಾರ್ಮೋನ್‌ಗಳು ಬಿಡುಗಡೆಯಾಗದಂತೆ ತಡೆಯುವ ಹಾರ್ಮೋನ್‌ಗಳು ಸಹ ಇವೆ. ಇವೇ ದೇಹದ ಬೆಳವಣಿಗೆಯನ್ನು ನಿಯಂತ್ರಿಸುವ ಹಾರ್ಮೋನ್, ಕಾರ್ಟಿಕೋ ಸ್ಟಿರಾಯ್ಡ್, (Corticosteroids) ಥೈರೊಟ್ರೋಪಿನ್ (Thyrotropin) ಮತ್ತು ಪ್ರೊಲ್ಯಾಕ್ಟಿನ್ (Prolactin) ಮೀಡಿಯಲ್ ಪ್ರೀ ಆಪ್ಟಿಕ್ ನ್ಯೂಕ್ಲಿಯಸ್ (Medial Pre-optic Nucleu) ಪುರುಷ ಮತ್ತು ಮಹಿಳೆಯರಲ್ಲಿ ವಿಭಿನ್ನವಾಗಿ ಕಾರ್ಯ ನಿರ್ವಹಿಸುತ್ತವೆ. ಎಫ್‌ಎಸ್‌ಎಚ್ (FSH) ಮತ್ತು ಎಲ್‌ಎಚ್ (LH) ಬಿಡುಗಡೆಯ ಮೇಲೆ ನಿಯಂತ್ರಣ ಹೊಂದಿರುವ ಗೊನಾಡೋಟ್ರೋಪಿನ್‌ಗಳು, ಇಸ್ಟ್ರೋಜೆನ್ ಮತ್ತು ಪ್ರೊಜೆಸ್ಟಾನ್‌ಗಳ ಬಿಡುಗಡೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಪುರುಷರಲ್ಲಿ ಎಫ್‌ಎಸ್‌ಎಚ್ ವೀರ್ಯ ಉತ್ಪಾದನೆಗೆ ಕಾರಣವಾದರೆ, ಎಲ್‌ಎಚ್ ಟೆಸ್ಟೋಸ್ಟಿರಾನ್ ಬಿಡುಗಡೆಗೆ ಕಾರಣವಾಗುತ್ತದೆ. ಸುಪ್ರಾ ಆಪ್ಟಿಕ್ ನ್ಯೂಕ್ಲಿಯಸ್ ರಕ್ತದಲ್ಲಿನ ನೀರಿನ ಅಂಶವನ್ನು ನಿಯಂತ್ರಿಸುತ್ತದೆ. ಆಕ್ಸೋನ್‌ಗಳು ಪೊಸ್ಟೆರಿಯರ್ ಪಿಟ್ಯುಟರಿ ಜೊತೆಗೆ ನೇರ ಸಂಬಂಧ ಹೊಂದಿದ್ದು ಎಡಿಎಚ್ ಅಥವಾ ವ್ಯಾಸೋಪ್ರೆಸ್ಸಿನ್ (Vasopressin) ಬಿಡುಗಡೆಗೆ ಕಾರಣವಾಗುತ್ತವೆ. ಇವು ರಕ್ತ ಮತ್ತು ಮೂತ್ರಕೋಶದಲ್ಲಿರುವ ನೀರಿನ ಸಂರಕ್ಷಣೆ ಮಾಡುವ ಕೆಲಸ ಮಾಡುತ್ತವೆ. ಪಿ.ವಿ. ನ್ಯೂಕ್ಲಿಯಸ್ ಆಕ್ಸಿಟೋಸಿನ್ (P.V. Nucleus) ಬಿಡುಗಡೆ ಮಾಡುತ್ತದೆ. ಮಕ್ಕಳು ಹಾಲು ಕುಡಿಯುವುದು ಅಥವಾ ಕರುಳಬಳ್ಳಿಯಿಂದ ಮಾತ್ರ ಆಕ್ಸಿಟೋಸಿನ್ ಬಿಡುಗಡೆ ಮಾಡುವಂತೆ ಮಾಡಲು ಸಾಧ್ಯವಿದೆ. ಇದನ್ನು ಹೈಪೋಥಾಲಮಸ್ನ ಹೈಪೋಫಿಸಿಕಲ್ ಗ್ರಂಥಿ ಎಂದು ಕರೆಯಲಾಗುತ್ತದೆ.

ಎಸ್.ಸಿ.ಎನ್ (SCN) ದೇಹದ ಜೈವಿಕ ಗಡಿಯಾರವಾಗಿದ್ದು, ಇದು ಕಣ್ಣು ಮತ್ತು ಪಿನಿಯಲ್ ಗ್ರಂಥಿಗೆ ನೇರ ಸಂಪರ್ಕ ಹೊಂದಿದೆ. ಕತ್ತಲಿನಲ್ಲಿ ಇದು ಮೆಲಾಟೋನಿನ್ ಬಿಡುಗಡೆ ಮಾಡುವಂತೆ ಪಿನಿಯಲ್‌ಗ್ರಂಥಿಯನ್ನು ಪ್ರಚೋದಿಸುತ್ತದೆ. ಈ ಮೂಲಕ ನಿದ್ರೆ ಮತ್ತು ಎಚ್ಚರ ಪ್ರಕ್ರಿಯೆ ಮೇಲೆ ನಿಯಂತ್ರಣ ಹೊಂದಿರುತ್ತದೆ. ಇದರ ಜೊತೆಗೆ ದೇಹದ ಪ್ರತಿಯೊಂದು ಪ್ರಕ್ರಿಯೆಯನ್ನೂ ನಿಯಂತ್ರಿಸುವಲ್ಲಿ ಎಸ್ಸಿಎನ್ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ.

## ಸ್ವಯಂಚಾಲಿತ ನರವ್ಯವಸ್ಥೆ (Autonomic Nervous System)

ಇದು ಮೆದುಳಿನ ಸ್ವಯಂಪ್ರೇರಿತವಲ್ಲದ ಪ್ರಕ್ರಿಯೆಗಳಿಗೆ ಸಂಬಂಧಿಸಿದ್ದು. ಇವುಗಳ ಮೇಲೆ ಮೆದುಳಿಗೆ ಅತ್ಯಂತ ಕಡಿಮೆ ನಿಯಂತ್ರಣವಿದ್ದು, ದೇಹದ ಇತರ ಭಾಗಗಳ ಅವಶ್ಯಕತೆಯನ್ನು ಪೂರೈಸುವ ಕಾರ್ಯವನ್ನು ನಿರ್ವಹಿಸುತ್ತವೆ. ಆಂಟೀರಿಯರ್ ಹೈಪೋಥಾಲಮಿಕ್ ಮತ್ತು ಪೊಸ್ಟೆರಿಯರ್ ಕರೆಸ್ಪಾಂಡಿಂಗ್ ನ್ಯೂಕ್ಲಿಯಸ್ ದೇಹದ ಸ್ವಯಂಚಾಲಿತ ನರ ವ್ಯವಸ್ಥೆಯನ್ನು ನಿಯಂತ್ರಿಸುತ್ತವೆ.

ಪ್ಯಾರಾಸಿಂಪಥೆಟಿಕ್ (Parasympathetic) ಮೆದುಳಿನಿಂದ ಬೆನ್ನು ಮೂಳೆಯವರೆಗೆ ಈ ನರವ್ಯವಸ್ಥೆ ಹರಡಿಕೊಂಡಿದ್ದು, ಇದನ್ನು 'ಡೋರ್ಸಲ್ ಲಾಂಗಿಟ್ಯುಡನಲ್ ಫಾಸಿಕ್ಯುಲಸ್' (Dorsal Longitudinal Fasciculus,) ಎಂದು ಕರೆಯುತ್ತಾರೆ. ಕಾರ್ನಿಯಲ್ ನರವ್ಯೂಹದ ಜೊತೆಗೆ ಇದು ಪ್ರಮುಖವಾಗಿ ಕಾರ್ಯ ನಿರ್ವಹಿಸುತ್ತದೆ. ಕಾರ್ನಿಯೋ ಸಾಕ್ರಲ್ ನಿಯಂತ್ರಣ ವ್ಯವಸ್ಥೆ ಎಂದು ಕರೆಯಲಾಗುವ ನರವ್ಯವಸ್ಥೆಯ ಜೊತೆಗೆ ಬೆನ್ನಿನ ಮೇಲೆ ನಿಯಂತ್ರಣ ಹೊಂದಿರುತ್ತದೆ. ಇಡಬ್ಲ್ಯೂ ನ್ಯೂಕ್ಲಿಯಸ್ ಕಣ್ಣಿನ ಚಲನೆ, ಮುಖದ ನರವ್ಯವಸ್ಥೆಯಲ್ಲಿರುವ ಸೂಪರ್ ಸಲೈವೇಟರಿ ನ್ಯೂಕ್ಲಿಯಸ್, ಗ್ಲಾಸೋಂಪಾರಿನ್ಗಿಲ್ ನರವ್ಯವಸ್ಥೆಯಲ್ಲಿರುವ ಇನ್ಫಿರಿಯರ್

ಸಲೈವೇಟರಿ ನ್ಯೂಕ್ಲಿಯಸ್ ಮತ್ತು ಕೊನೆಯದಾಗಿ ವೇಗಸ್ನಲ್ಲಿರುವ ಡೋರ್ಸಲ್ ನ್ಯೂಕ್ಲಿಯಸ್ ಇತರ ನಿಯಂತ್ರಣಗಳನ್ನು ಮಾಡುತ್ತವೆ. ಸಾಕ್ರಲ್ ನರವ್ಯವಸ್ಥೆ ಬೆನ್ನು ಮೂಳೆಯ ಭಾಗಗಳಲ್ಲಿ ಹರಡಿದ್ದು ಎಸ್2–4 ಎಂದು ಕರೆಸಿಕೊಳ್ಳುತ್ತದೆ. ಇವೆಲ್ಲದರ ಜೊತೆಗೆ ಮೆದುಳಿನ ಕಾಂಡದಲ್ಲಿರುವ ರೆಟಿಕ್ಯುಲರ್ ಆ್ಯಕ್ಟಿವೇಷನ್ ಸಿಸ್ಟಮ್ ಜೊತೆಗೆ ಇದು ಸಂಬಂಧ ಹೊಂದಿದೆ. ಈ ನರವ್ಯವಸ್ಥೆ ರುಚಿಯನ್ನು ಕಂಡು ಹಿಡಿಯುವುದು, ಹೃದಯದ ಬಡಿತ ಮತ್ತು ನಾಲಗೆ ನೀಡುವ ಪ್ರತಿಕ್ರಿಯೆಯನ್ನು ಮೆದುಳಿನ ಕಾಂಡದಿಂದ ಹೈಪೋಥಾಲಮಸ್ಗೆ ತಲುಪಿಸುತ್ತದೆ.

ಸಿಂಪಥೆಟಿಕ್ (Sympathetic) ಆಂಟಿರಿಯರ್ ಹೈಪೋಥಾಲಮಿಕ್ ನ್ಯೂಕ್ಲಿಯಸ್ ದೇಹದ ಉಷ್ಣತೆಯನ್ನು ನಿಯಂತ್ರಿಸುವ ಕೆಲಸ ಮಾಡುತ್ತದೆ. ದೇಹದ ಉಷ್ಣತೆಯನ್ನು ತಗ್ಗಿಸಲು ಸಣ್ಣರಕ್ತನಾಳಗಳನ್ನು ಉಬ್ಬಿಸುವ ಮೂಲಕ ಅಥವಾ ಬೆವರು ಬರುವಂತೆ ಮಾಡುತ್ತದೆ.

ಪೊಸ್ಟೀರಿಯರ್ ಹೈಪೋಥಾಲಮಿಕ್ (Posterior Hypothalamic) ನ್ಯೂಕ್ಲಿಯಸ್ ಥೊರಾಕೋ ಲಂಬರ್ ಔಟ್‌ಫ್ಲೋ ಎಂದು ಕರೆಸಿಕೊಳ್ಳುವ ನರವ್ಯವಸ್ಥೆ ಟಿ1 ರಿಂದ ಎಲ್2 ವರೆಗೆ ಹರಡಿದೆ. ಇವನ್ನು ಹೈಪೋಥಾಲಮೋ ಸ್ಪೈನಲ್‌ಗ್ರಂಥಿ ಎನ್ನುತ್ತಾರೆ. ಇವು ದೇಹದ ಉಷ್ಣತೆ ಹೆಚ್ಚಾಗಲು ಮಾಡಬೇಕಾದ ಪ್ರಕ್ರಿಯೆಗಳನ್ನು ನಿರ್ವಹಿಸುತ್ತವೆ. ದೇಹ ನಡುಗುವುದು ಸಹ ಇದೇ ಕಾರಣದಿಂದ. ಇದರ ಹಿಂದೆ ದೇಹದ ಉಷ್ಣತೆಯನ್ನು ಹೆಚ್ಚಿಸುವ ಉದ್ದೇಶವಿರುತ್ತದೆ.

ನ್ಯೂಕ್ಲಿಯಸ್ ಅಕ್ಯುಂಬೆನ್ಸ್ (Nucleus Accumbence) ಇದು ಹೈಪೋಥಾಲಮಸ್ನ ಅತ್ಯಂತ ಪ್ರಮುಖ ಅಂಗವಾಗಿದ್ದು ನಾವು ಯಾವುದೇ ವ್ಯಕ್ತಿ, ಸ್ಥಳ, ವಸ್ತುವನ್ನು ನೋಡಿದಾಗ ಅಥವಾ ಅದರ ಬಗ್ಗೆ ತಿಳಿದಾಗ ಆಗುವ ನೆನಪುಗಳು ಬರಲು ಈ ಅಂಗ ಕಾರಣವಾಗಿದೆ. ನೀವು ಯಾವುದೇ ನಿರ್ದಿಷ್ಟ ವ್ಯಕ್ತಿಯನ್ನು ನೋಡಿದಾಗ ತಕ್ಷಣವೇ ಹಿಂದಿನ ನೆನಪುಗಳು ಮೆದುಳಿನಲ್ಲಿ ಜಾಗೃತವಾಗುತ್ತವೆ. ಇದನ್ನು ಆಧರಿಸಿ ನಿಮ್ಮ ವರ್ತನೆಯಲ್ಲಿ ಬದಲಾವಣೆಯಾಗುತ್ತದೆ. ಆ ವ್ಯಕ್ತಿಯ ಜೊತೆಗೆ ಮಧುರ ಬಾಂಧವ್ಯ ಇದ್ದರೆ ನಿಮ್ಮ ಭಾವನೆ ಉತ್ತಮವಾಗಿರುತ್ತದೆ, ಇಲ್ಲವಾದರೆ ಮುಖದಲ್ಲಿ ಅಸಮಾಧಾನದ ಭಾವನೆ ತಕ್ಷಣ ವ್ಯಕ್ತವಾಗುತ್ತದೆ. ನೆನಪುಗಳ ಮರುಕಳಿಸುವ ವೇಗ ಬೆಳಕಿನ ವೇಗಕ್ಕಿಂತಲೂ ಹೆಚ್ಚಾಗಿದ್ದು, ಕಾರ್ಟೆಕ್ಸ್‌ಗೆ ತಲುಪುವ ಮಾಹಿತಿ ಆಧರಿಸಿ ನಮ್ಮ ವರ್ತನೆಯಲ್ಲಿ ಬದಲಾವಣೆ ಆಗುತ್ತದೆ. ಒಂದು ವೇಳೆ ತನಗೆ ಸಿಗುವ ಯಾವುದೇ ಮಾಹಿತಿ ಕುರಿತು ಜಾಗೃತನಾಗದಿದ್ದರೆ ತಕ್ಷಣವೇ ಪ್ರತಿಕ್ರಿಯೆ ತೋರ್ಪಡಿಸುತ್ತಾನೆ. ನೆನಪಿನಶಕ್ತಿಯಲ್ಲಿ ಸಂಗ್ರಹವಾಗಿದ್ದ ಮಾಹಿತಿಯು ಕಾರ್ಟೆಕ್ಸ್‌ಗೆ ರವಾನೆಯಾಗುವುದನ್ನು ಮತ್ತು ಅಮಿಗ್ಡಾಲಾ ಉತ್ಪಾದಿಸುವ ಭಾವನೆಗಳನ್ನು ನಮ್ಮ ವರ್ತನೆಯು ಆಧರಿಸಿರುತ್ತದೆ.

■ ಕನ್ನಡಕ್ಕೆ: ಬಿ.ಎಂ. ಸುನೀತಾ

# ಭವಿಷ್ಯದಲ್ಲಿ ವೈದ್ಯಕೀಯ ಕಾಲೇಜುಗಳ ಪಾತ್ರ

(ಪುಟ 11ರಿಂದ...)

ವೈದ್ಯಕೀಯ ಕ್ಷೇತ್ರದಲ್ಲಿರುವವರು ಅಪಾಯಕಾರಿ ಪರಿಸ್ಥಿತಿಗಳನ್ನು ಎದುರಿಸುವಾಗ ಸ್ವಯಂ ರಕ್ಷಣೆಯ ಕುರಿತು ಸಹ ತರಬೇತಿ ನೀಡಬೇಕಾಗಿದೆ. ಇಂತಹವರು ಎಷ್ಟು ಮಹತ್ವ ಹೊಂದಿದ್ದಾರೆ ಎಂದು ಇಡೀ ಜಗತ್ತು ಈಗ ಅರಿತುಕೊಂಡಿದೆ. ಎಂತಹುದೇ ಪರಿಸ್ಥಿತಿಯಲ್ಲಿ ಅವರು ಸ್ವಯಂ ರಕ್ಷಣೆ ಮಾಡಿಕೊಳ್ಳಲೇಬೇಕಿದೆ. ಅವರ ರಕ್ಷಣೆಯೇ ಇಡೀ ಸಮಾಜ ಮತ್ತು ದೇಶದ ಮಟ್ಟಿಗೆ ಅತ್ಯಂತ ಮಹತ್ವದ್ದಾಗಿದೆ. ವೈದ್ಯಕೀಯ ಕಾಲೇಜುಗಳು ಉತ್ತಮ ರೀತಿಯಲ್ಲಿ ಶಿಕ್ಷಣ ನೀಡುವುದು ಮಾತ್ರವಲ್ಲದೆ, ಸ್ವಯಂ ರಕ್ಷಣೆ ಮಾಡಿಕೊಳ್ಳುವ ವಿಧಾನಗಳನ್ನು ಕಲಿಸಲು ಆದ್ಯತೆ ನೀಡಬೇಕಾಗಿದೆ. ಇಂತಹವರು ದೇಶದ ಅತ್ಯಂತ ಮಹತ್ವದ ಸಂಪನ್ಮೂಲವಾಗುತ್ತಾರೆ ಎಂಬುದನ್ನು ಮರೆಯಬಾರದು. ಸರ್ಕಾರಗಳು ಇದರ ಮಹತ್ವವನ್ನು ಅರಿತುಕೊಂಡು, ಸ್ವಯಂ ರಕ್ಷಣೆ ಮಾಡಿಕೊಂಡು ಚಿಕಿತ್ಸೆ ನೀಡುವಂತೆ ಶಿಕ್ಷಣ ನೀಡಲು ಎಲ್ಲ ರೀತಿಯ ನೆರವು ನೀಡಬೇಕಾಗಿದೆ.

ವೈದ್ಯಕೀಯ ಕಾಲೇಜುಗಳು ಮತ್ತು ವೈದ್ಯಕೀಯ ವಿಶ್ವವಿದ್ಯಾಲಯಗಳು ಸ್ವಯಂ ರಕ್ಷಣೆ ಮಾಡಿಕೊಂಡು ಚಿಕಿತ್ಸೆ ನೀಡುವ ಕುರಿತು ಆದ್ಯತೆ ನೀಡಬೇಕಿದೆ. ಕಾಲಕ್ಕೆ ತಕ್ಕಂತೆ ಶಿಕ್ಷಣ ವಿಧಾನವನ್ನು ಸುಧಾರಣೆ ಮಾಡಬೇಕಾಗಿದೆ. ಜ್ಞಾನವನ್ನು ಸಂಪಾದಿಸುವುದು ಬಹಳ ಕಷ್ಟ ಎಂಬ ಕಾಲ ಮುಗಿದುಹೋಗಿದೆ. ಅತಿ ಹೆಚ್ಚಿನ ಜ್ಞಾನಾರ್ಜನೆ ಮಾಡಿಕೊಳ್ಳುವ ಕಾಲಘಟ್ಟದಲ್ಲಿ ನಾವಿದ್ದೇವೆ. ಪ್ರಸ್ತುತ ಲಭ್ಯವಿರುವ ಜ್ಞಾನವನ್ನು ಸಮರ್ಥವಾಗಿ ಒಂದೆಡೆ ಕೂಡಿಡುವುದು ಸಹ ಅಸಾಧ್ಯವಾಗಿದೆ. ಹೀಗಾಗಿ ಮೂಲಭೂತ ಮತ್ತು ತಾಂತ್ರಿಕ ಕೌಶಲ್ಯದ ಕುರಿತು ಹೆಚ್ಚಿನ ಗಮನ ನೀಡಬೇಕಿದೆ. ಇವೆರಡರ ಜೊತೆಗೆ ಪ್ರಸ್ತುತ ಮತ್ತು ಭವಿಷ್ಯದಲ್ಲಿ ಎದುರಿಸಬೇಕಾದ ಸವಾಲುಗಳನ್ನು ಗಮನದಲ್ಲಿಟ್ಟುಕೊಂಡಾಗ ಮಾತ್ರ ಸರ್ವವ್ಯಾಪಿ, ಸ್ವತಂತ್ರ ಮತ್ತು ಸ್ವಾವಲಂಬಿಯಾಗಿರಲು ಸಾಧ್ಯವಾಗುತ್ತದೆ. ಈ ಗುರಿಯನ್ನು ಸಾಧಿಸಲು ವೈದ್ಯಕೀಯ ಕಾಲೇಜುಗಳು ಕೇವಲ ಶಿಕ್ಷಣವನ್ನು ನೀಡಿದರೆ ಮಾತ್ರ ಆಗುವುದಿಲ್ಲ. ಬದಲಿಗೆ ವಿದ್ಯಾರ್ಥಿಗಳಿಗೆ ಸರಿಯಾದ ರೀತಿಯಲ್ಲಿ ಮಾರ್ಗದರ್ಶನ ನೀಡಬೇಕಿದೆ. ವೈದ್ಯಕೀಯ ಕಾಲೇಜುಗಳು ಕೇವಲ ಪರೀಕ್ಷೆಗಳನ್ನು ಬರೆಯುವ ರೀತಿ ಪಠ್ಯವನ್ನು ರೂಪಿಸದೆ, ಭವಿಷ್ಯದ ಸವಾಲುಗಳನ್ನು ಎದುರಿಸುವ ರೀತಿಯಲ್ಲಿ ಪಠ್ಯವನ್ನು ಪುನರ್‌ರಚಿಸಬೇಕಿದೆ. ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವವರು ಸೂಕ್ತವಾದ ಜ್ಞಾನ ಸಂಪಾದನೆಯ ಮಾರ್ಗಗಳ ಕುರಿತು ಮಾಹಿತಿ, ಅವಶ್ಯಕ ಕೌಶಲ್ಯ ಅಭಿವೃದ್ಧಿ, ಕ್ರಿಯಾಶೀಲತೆ ಮತ್ತು ಆತ್ಮವಿಶ್ವಾಸ ಬೆಳೆಸಲು ನೆರವಾಗಬೇಕು. ವೈದ್ಯಕೀಯ ಕಾಲೇಜುಗಳ ವಿದ್ಯಾರ್ಥಿಗಳು ಮನುಷ್ಯನ ಕುರಿತು ಅರಿತುಕೊಳ್ಳುವ ಮೂಲಕ ಮನುಷ್ಯತ್ವವನ್ನು ಅರಿತುಕೊಳ್ಳುವ ಅತ್ಯುತ್ತಮ ಅವಕಾಶಗಳನ್ನು ಬಳಸಿಕೊಳ್ಳಬೇಕು. ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿನ ಅತ್ಯುತ್ತಮ ಕೌಶಲ್ಯವನ್ನು ಹೊರ ತರುವ ಜವಾಬ್ದಾರಿಯನ್ನು ಅಲ್ಲಿನ ಶಿಕ್ಷಕರು ಹೊಂದಿರುತ್ತಾರೆ. ಈ ಮೂಲಕ ಕೇವಲ ಕಲಿಯುವಿಕೆ ಮಾತ್ರವೇ ಅಲ್ಲದೆ ತಮ್ಮದೇ ಆದ ಹೊಸ ಕೊಡುಗೆ ನೀಡುವಂತೆ ಮಾಡಬಹುದು.

ವೈದ್ಯಕೀಯ ಕಾಲೇಜುಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಹೆಚ್ಚುತ್ತಿದ್ದರೂ, ನಮ್ಮ ಅವಶ್ಯಕತೆಗೆ ತಕ್ಕಂತೆ ಪೂರೈಕೆಯಲ್ಲಿ ಹಿಂದೆ ಬಿದ್ದಿದ್ದೇವೆ. ದಿನೇದಿನೇ ಹೆಚ್ಚುತ್ತಿರುವ ಬೇಡಿಕೆ, ಜನಸಂಖ್ಯೆಯ ಹೆಚ್ಚಳ ಮತ್ತು ಭವಿಷ್ಯದಲ್ಲಿ ಎದುರಾಗುವ ಅಪಾಯಕಾರಿ ಸವಾಲು ಗಳನ್ನು ಎದುರಿಸಬೇಕಾಗುವುದರಿಂದ ಈಗಿರುವ ಪರಿಸ್ಥಿತಿ ಮುಂದುವರಿಯುತ್ತಲೇ ಇರುತ್ತದೆ. ಬೇಡಿಕೆಗೆ ತಕ್ಕ ಪೂರೈಕೆ ಆಗುವವರೆಗೆ ಈಗಿರುವ ಪರಿಸ್ಥಿತಿಯಲ್ಲಿ ಸೂಕ್ತ ತಯಾರಿ ಮತ್ತು ಈಗಿನ ವ್ಯವಸ್ಥೆಯಲ್ಲಿ ಸುಧಾರಣೆ ತರಬೇಕಿರುವುದೇ ಸದ್ಯಕ್ಕಿರುವ ಪರಿಹಾರವಾಗಿದೆ.

■ ಕನ್ನಡಕ್ಕೆ: ಬಿ.ಎಂ. ಸುನೀತಾ

ಸನ್ನಿಧಿ

ಡಾ. ಎನ್. ಕೆ. ವೆಂಕಟರಮಣ

# ಕರ್ನಾಟಕ ಸಂಗೀತ ಲೋಕದ ದಿಗ್ಗಜ - ಎಂ ಬಾಲಮುರಳಿಕೃಷ್ಣ



ವಿಶ್ವವಿಖ್ಯಾತಕರ್ನಾಟಕ ಸಂಗೀತಗಾರ ಶ್ರೀಮಂಗಳಂಪಲ್ಲಿ ಬಾಲಮುರಳಿಕೃಷ್ಣ. ತಾಳ, ಗಾನ, ಪಲ್ಲವಿಯ ಹೊಸ ಪ್ರಯೋಗಗಳ ಹರಿಕಾರ ಎನಿಸಿಕೊಂಡ ಡಾ.ಎಂ. ಬಾಲಮುರಳಿಕೃಷ್ಣ, ಭಾರತ ಕಂಡ ಮಹಾನ್ ವಾಗ್ಗೇಯಕಾರ. ಗಾಯನ ಸಾಮರ್ಥ್ಯದ ಹೊರತಾಗಿಯೂ, ಅವರ ಆಳವಾದ ಜ್ಞಾನ ಅವರಿಗೆ ಅತ್ಯುನ್ನತ ಖ್ಯಾತಿ ತಂದುಕೊಟ್ಟಿತ್ತು. ಅವರು ಕೇವಲ ಕೆಲವು ಸಂಕೀರ್ಣ ಹಾಗೂ ಸಂಕೀರ್ಣವಾದ ರಾಗಗಳನ್ನು ಮಾತ್ರ ಕರಗತ ಮಾಡಿಕೊಂಡವರಲ್ಲ. ಅನೇಕ ಹಾಡುಗಳು, ಹಲವಾರು ಕೃತಿಗಳು ಮತ್ತು ಹೊಸ ರಾಗಗಳನ್ನು ರಚಿಸಿದವರು. ಅಂತಹ ಸೃಜನಾತ್ಮಕ ಮತ್ತು ನವೀನ ಸಾಮರ್ಥ್ಯಗಳು ಅವರನ್ನು ಜನಪ್ರಿಯ ಹಾಗೂ ಅನನ್ಯವಾಗಿಸಿದ್ದವು.

ಕರ್ನಾಟಕ ಶೈಲಿಯ ಸಂಗೀತಗಾರರಲ್ಲಿ ಅವರೊಬ್ಬ ಅದ್ವಿತಿಯರು. ಸ್ವತಃ ವಾಗ್ಗೇಯಕಾರಾಗಿದ್ದ ಅವರು, ಹಲವಾರು ಕೃತಿಗಳಿಗೆ ರಾಗ ಸಂಯೋಜನೆಗಳನ್ನು ಮಾಡಿದ್ದಾರೆ. ಭಾರತದಲ್ಲಿ ಮಾತ್ರವಲ್ಲದೆ, ವಿಶ್ವದಾದ್ಯಂತ ಇಪ್ಪತ್ತೈದು ಸಾವಿರಕ್ಕೂ ಹೆಚ್ಚು ಸಂಗೀತ ಕಛೇರಿಗಳನ್ನು ನಡೆಸಿಕೊಟ್ಟವರು. ಹೊಸ ರಾಗಗಳು, ಹೊಸ ಕೃತಿಗಳು, ಹೊಸ ರಾಗ ಸಂಯೋಜನೆಗಳು ಮತ್ತು ಹೊಸ ವಾದ್ಯಗಳನ್ನು ರಚಿಸುವಲ್ಲಿ ಅವರು ಸಾಕಷ್ಟು ಪ್ರಯೋಗಗಳನ್ನು ನಡೆಸಿದ್ದಲ್ಲದೇ, ಅದರಲ್ಲಿ ಯಶಸ್ಸನ್ನೂ ಕಂಡುಕೊಂಡವರು. ಕರ್ನಾಟಕ ಸಂಗೀತಕ್ಕೆ ವಯೋಲಾ (ದೊಡ್ಡ ಪಿಟೀಲು) ವಾದ್ಯವನ್ನು ಪರಿಚಯಿಸುವ ಜವಾಬ್ದಾರಿಯನ್ನು ಅವರು ಹೊಂದಿದ್ದರು. ಸಂಗೀತದ ಇತರ ಸಂಪ್ರದಾಯಗಳು ಮತ್ತು ಪಾಶ್ಚಿಮಾತ್ಯ ಸಂಗೀತದೊಂದಿಗೆ ಹಲವಾರು ಜುಗಲ್ಬಂಧಿಗಳ ಸಂಯೋಜನೆ ಮಾಡಿದವರು. ವಿಶಿಷ್ಟವಾದ ಧ್ವನಿ ಮತ್ತು ಅಸಾಧಾರಣ ಸಾಮರ್ಥ್ಯ ಹೊಂದಿದ್ದರು.

ಡಾ. ಮಂಗಳಂಪಲ್ಲಿ ಬಾಲಮುರಳಿಕೃಷ್ಣ ಅವರು 1930ರ ಜುಲೈ 6 ರಂದು. ಆಂಧ್ರಪ್ರದೇಶದ ಪೂರ್ವಗೋದಾವರಿ ಜಿಲ್ಲೆಯ 'ಸಂಕರಗುಪ್ತಂ' ಎಂಬ ಗ್ರಾಮದಲ್ಲಿ ಜನಿಸಿದ್ದರು. ಅವರ ಪೋಷಕರು ಸಹ ಸಂಗೀತಗಾರರಾಗಿದ್ದರು. ಮನೆಯಲ್ಲಿ ಸಂಗೀತಮಯ ವಾತಾವರಣ. ತಂದೆ ಮಂಗಳಂಪಲ್ಲಿ ಪಟ್ಟಾಭಿರಾಮಯ್ಯ ಅವರು ಶಾಸ್ತ್ರೀಯಸಂಗೀತಗಾರರು. ತಾಯಿ ಶ್ರೀಮತಿ ಸೂರ್ಯಕಾಂತಮ್ಮ ಶ್ರೇಷ್ಠ ವೀಣಾವಾದಕರು. ಬಾಲ್ಯದಲ್ಲೇ ಅವರ ತಾಯಿ ತೀರಿಕೊಂಡರು. ತಂದೆಯ ಪೋಷಣೆಯಲ್ಲಿ ಬೆಳೆದ ಅವರಿಗೆ ಮುರಳಿಕೃಷ್ಣ ಎಂದು ಹೆಸರಿಡಲಾಯಿತು. ಬಾಲ್ಯದಿಂದ ತಂದೆಯೇ ಅವರಿಗೆ ಗುರುಗಳು. ಮಗನ ಸಾಮರ್ಥ್ಯ ಮತ್ತು ಸಂಗೀತದಲ್ಲಿನ ಅಪಾರ ಆಸಕ್ತಿ ಗಮನಿಸಿದ ಅವರ ತಂದೆ, ಅವರನ್ನು ಕರ್ನಾಟಕ ಸಂಗೀತ ಕಲಿಯಲು ಮಹಾನ್ ಸಂತ, ವಾಗ್ಗೇಯಕಾರ ತ್ಯಾಗರಾಜರ ಶಿಷ್ಯರ ನೇರ ವಂಶಸ್ಥರಾದ ಪಾರಂಪಳ್ಳಿ ರಾಮಕೃಷ್ಣಯ್ಯ ಪಂತುಲು ಅವರ ಬಳಿ ಕಳುಹಿಸಿದರು. ಮುರಳಿಕೃಷ್ಣ ಅವರು ತಮ್ಮ ಆರನೇ ವಯಸ್ಸಿನಿಂದಲೇ ಸಂಗೀತ ಕಾರ್ಯಕ್ರಮಗಳನ್ನು ನೀಡಲು ಪ್ರಾರಂಭಿಸಿದರು. ತಮ್ಮ 8ನೇ ವಯಸ್ಸಿನಲ್ಲಿ ವಿಜಯವಾಡದಲ್ಲಿ ಪ್ರಮುಖ ಸಂಗೀತ ಕಾರ್ಯಕ್ರಮದಲ್ಲಿ ಪ್ರದರ್ಶನ ನೀಡಿದಾಗ, ಬಾಲಕನ ಗಾಯನದಿಂದ ಪ್ರಭಾವಿತರಾದ ಹರಿಕಥಾ ವಿದ್ವಾನ್ ಶ್ರೀಮುಸುನೂರಿ ಸೂರ್ಯನಾರಾಯಣಮೂರ್ತಿ ಭಾಗವತರು ಅವರಿಗೆ 'ಬಾಲ' ಅಂದರೆ ಬಾಲ ಕಲಾವಿದ ಎಂಬ ಬಿರುದು ನೀಡಿದರು. ಅಂದಿನಿಂದ ಬಾಲ ಪೂರ್ವ ಪ್ರತ್ಯಯವನ್ನು ಅವರ ಹೆಸರಿನೊಂದಿಗೆ ಸೇರಿಸಲಾಯಿತು ಹಾಗೂ ಮಂಗಳಂಪಲ್ಲಿ ಬಾಲಮುರಳಿಕೃಷ್ಣ ಎಂದು ಕರೆಯಲಾಯಿತು. ತಮ್ಮ 15ನೇ ವಯಸ್ಸಿನಲ್ಲಿ ಅವರು ಕರ್ನಾಟಕ ಸಂಗೀತದಲ್ಲಿ 72 ಮೇಳಕರ್ತ ರಾಗಗಳನ್ನು ಕರಗತ ಮಾಡಿಕೊಂಡರು. ಪರಿಪೂರ್ಣತೆಯೊಂದಿಗೆ ಕಲಿಯುವ ವಿಶೇಷ ಸಾಮರ್ಥ್ಯ ಹೊಂದಿದ್ದ ಅವರ ಅಗಾಧ ಗುಣಮಟ್ಟದ ವಾಕ್ಚಾತುರ್ಯವು ಅವರನ್ನು ಶೀರ್ಘದಲ್ಲೇ ಹೆಚ್ಚು ಬೇಡಿಕೆಯ ಗಾಯಕನನ್ನಾಗಿ ಮಾಡಿತು. ನಂತರ ಅವರು ಆ 72 ರಾಗಗಳಲ್ಲಿ ಪ್ರತಿಯೊಂದರಲ್ಲೂ ಕೃತಿಗಳನ್ನು ರಚಿಸಿದರು. ನಂತರ ತಮ್ಮದೇ ಆದ ಕೆಲವು ರಾಗಗಳು ಮತ್ತು ಕೃತಿಗಳನ್ನು ರಚಿಸಿದರು. ಅದು ಅವರನ್ನು ಕರ್ನಾಟಕ ಸಂಗೀತಕ್ಕೆ ವಿಶೇಷ ಕೊಡುಗೆಯಾಗಿ ಖ್ಯಾತಿ ತಂದುಕೊಟ್ಟಿತು. 1952ರಲ್ಲಿ ಅವರ ರಚನೆಗಳನ್ನು 'ಜನಕರಾಗ ಮಂಜರಿ' ಎಂದು ಪ್ರಕಟಿಸಲಾಯಿತು. ಅದೇ ಒಂಬತ್ತು ಸಂಪುಟಗಳ ಧ್ವನಿಸುರುಳಿಯನ್ನು 'ರಾಮಗಂಗಾರವಳಿ' ಎಂದು ದಾಖಲಿಸಲಾಗಿದೆ. ಖಂಜೀರ, ಮೃದಂಗ, ವಯೋಲಾ, ಪಿಟೀಲು ಮುಂತಾದ ಸಂಗೀತ ವಾದ್ಯಗಳನ್ನು ನುಡಿಸುವದರಲ್ಲೂ ಅವರು ನಿಪುಣರಾಗಿದ್ದರು.

ಬಾಲಮುರಳಿಕೃಷ್ಣ ಅವರು ತಮ್ಮ ವೃತ್ತಿಜೀವನದಲ್ಲಿ ಅಪರಿಮಿತ ಸೃಜನಶೀಲತೆಯೊಂದಿಗೆ ಸಾಕಷ್ಟು ಪ್ರಯೋಗಶೀಲರಾಗಿದ್ದರು. ಕರ್ನಾಟಕ ಸಂಗೀತದಲ್ಲಿ ಗಣಪತಿ, ಸರ್ವಶ್ರೀ, ಮಹತಿ, ಲವಂಗಿ, ಸಿದ್ಧಿ, ಸುಮುಖಂ, ಓಂಕಾರಿ, ರೋಹಿಣಿ, ತ್ರಿಶಕ್ತಿ, ಜನಸಮ್ಮೋಹಿನಿ, ವಲ್ಲಭಿ, ಮನೋರಮಾ, ಪ್ರತಿ ಮಧ್ಯಮಾವತಿ ಮತ್ತು ಸುಷಮಾ ರಾಗಗಳು ಅವರ ಮೂಲ ಕೊಡುಗೆಗಳು. ತಾಳ ಪದ್ಧತಿಯಲ್ಲೂ ಅವರು ಬಹಳ ಪ್ರವೀಣರಾಗಿದ್ದರು. 'ಗತಿ ಭೇದಂ ಮತ್ತು ಸಶಬ್ದ ಕ್ರಿಯಾ' ಎಂಬ ಲಯ ವ್ಯವಸ್ಥೆಗಳನ್ನು ಕುತೂಹಲದಿಂದ ಕಂಡುಹಿಡಿದರು ಮತ್ತು ಪರಿಚಯಿಸಿದರು. ಅವರು ತಾರ್ಕಿಕಲಯದಲ್ಲಿ ಲಯ ವ್ಯವಸ್ಥೆಗಳಲ್ಲಿ ಅಂತಹ 'ಸಂದಮ್ಮಳನ್ನು' ತಂದರು. ಅವರ ಹೊಸ ತಾಳ ವ್ಯವಸ್ಥೆಗಳನ್ನು ನಂತರ 'ತ್ರಿಮುಖಿ, ಪಂಚಮುಖಿ, ಸಪ್ತಮುಖಿ ಮತ್ತು ನವಮುಖಿ' ಎಂದು ವರ್ಗೀಕರಿಸಲಾಯಿತು. ಸಂಗೀತದ ಬಗ್ಗೆ ಸಂಶೋಧನೆ ಮಾಡಲು ಸ್ವಿಡ್ಜರ್‌ಲೆಂಡ್‌ನಲ್ಲಿ ಪ್ರದರ್ಶನ ಕಲೆಗಳು ಮತ್ತು ಸಂಶೋಧನಾ ಅಕಾಡೆಮಿಯೊಂದಿಗೆ ಸಹಕಾರ ನೀಡಿದ ಅವರು, ಸಂಗೀತ ಚಿಕಿತ್ಸೆಯ ಪರಿಕಲ್ಪನೆಯನ್ನು ಪರಿಚಯಿಸಿದವರು.

Brain Voice News letter, Kannda & English, Monthly. RNI.No.KARBIL/2018/78464,
Regd.No.G2/KRNA/BGE-1168/2022-2024. Date Of Publication 29th of every month and posted on the 30th of every month at Bengaluru PSO, Mysore Road, Bengaluru, 560 026. Pages 20






**ಎಂಟನೆಯ ವಯಸ್ಸಿನಲ್ಲಿ ಮಂಚಾಲಿಪಟ್ಟಂನಲ್ಲಿ ಡಾ.ಬಾಲಕೃಷ್ಣಮುರುಳಿ ಸಂಗೀತ ಕಚೇರಿ. ಪ್ರವೇಶ ದರ 0.2. ಪೈಸೆ..**

ಅವರ ಸಂಯೋಜನೆಯ 'ಶ್ರೇಯಾಕಪ್ಪಗಂತುಲಾ' ಮಾನಸಿಕ ಆರೋಗ್ಯದ ಅಸ್ವಸ್ಥತೆಗಳನ್ನು ಗುಣಪಡಿಸುವ ಸಾಮರ್ಥ್ಯ ಹೊಂದಿದೆ ಎಂದು ಪರಿಗಣಿಸಲಾಗಿದೆ. ಅಂತಿಮವಾಗಿ ಅವರು ನಾನೂರಕ್ಕೂ ಹೆಚ್ಚು ಸಂಯೋಜನೆಗಳನ್ನು ಮಾಡಿದರು. ವರ್ಣಗಳು, ಕೃತಿಗಳು, ತಿಲ್ಲಾನಗಳು ಮತ್ತು ಭಾವಗೀತೆಗಳನ್ನು ವಿವಿಧ ತಾಳಗಳನ್ನೊಳಗೊಂಡಿರುವ ಕರ್ನಾಟಕ ಸಂಗೀತಕ್ಕೆ ವಿಶೇಷ ಕೊಡುಗೆಗಳನ್ನು ನೀಡುವಲ್ಲಿ ಪ್ರಮುಖರಾಗಿದ್ದವರು.

ಅವರು ವಿವಿಧ ಸಂಪ್ರದಾಯಗಳ, ನಾನಾ ಪ್ರಸಿದ್ಧ ಕಲಾವಿದರಾದ ಶ್ರೀ ಭೀಮಸೇನ್ ಜೋಶಿ (ಹಿಂದೂಸ್ತಾನಿ), ಪಂಡಿತ್ ಹರಿಪ್ರಸಾದ್ ಚೌರಾಸಿಯಾ (ಕೊಳಲು), ಪಂಡಿತ್ ಅಜೋಯ್ ಚಕ್ರವರ್ತಿ ಮತ್ತು ಕಿಶನ್‌ಅಮೋನ್ಕರ್ ಅವರೊಂದಿಗೆ ಜುಗಲ್ಬಂಧಿ ನಡೆಸಿದವರು. ಶ್ರೀತ್ಯಾಗರಾಜರ ಹೊರತಾಗಿ, ಶ್ರೀ ರಾಮದಾಸ್ ಮತ್ತು ಅನ್ನಮಯ್ಯ ಅವರ ರಚನೆಗಳನ್ನು ಜನಪ್ರಿಯಗೊಳಿಸಿದವರು.

ಭಾರತ ಸರ್ಕಾರದಿಂದ ಪದ್ಮಶ್ರೀ, ಪದ್ಮಭೂಷಣ ಹಾಗೂ ಪದ್ಮವಿಭೂಷಣ ಮೂರು ನಾಗರಿಕ ಪ್ರಶಸ್ತಿಗಳಿಗೂ ಭಾಜನರಾದರು. ಎಲ್ಲ ದೇಶದಲ್ಲೂ ಸಂಗೀತ ಕಛೇರಿಗಳನ್ನು ನಡೆಸುವ ಮೂಲಕ ವಿಶ್ವದಾದ್ಯಂತ ಪ್ರಸಿದ್ಧರಾದರು ಹಾಗೂ ಗೌರವಾನ್ವಿತರಾಗಿದ್ದರು. ಫ್ರೆಂಚ್ ಸರ್ಕಾರವು ಅವರ ಶ್ರೇಷ್ಠತೆಯನ್ನು ಗುರುತಿಸಿ ಆರ್ಡ್ರೆಡೆಸ್ ಆರ್ಟ್ಸ್‌ಎಟ್‌ಡೆಸ್ ಪತ್ರಗಳ ಚೆವಲಿಯರ್ ನೀಡಿ ಗೌರವಿಸಿತು. ಕಾಲಕಾಲಕ್ಕೆ ಅವರು ಅಸಂಖ್ಯಾತ ರಾಷ್ಟ್ರೀಯ ಪ್ರಶಸ್ತಿಗಳು ಹಾಗೂ ಗೌರವಗಳನ್ನು ಪಡೆದರು. ಭಾರತ ಸರ್ಕಾರ ಅವರ ಕುರಿತು ಸಾಕ್ಷ್ಯಚಿತ್ರವನ್ನೂ ಸಹ ನಿರ್ಮಿಸಿದೆ.

ಅವರು ತಮ್ಮ 86ನೇ ವಯಸ್ಸಿನಲ್ಲಿ ಅಂದರೆ, 2016ರ ನವೆಂಬರ್ 26ರಂದು ಚೆನ್ನೈನಲ್ಲಿ ನಿಧನರಾದರು. ಅವರು ಅಸಾಧಾರಣ ಸಾಮರ್ಥ್ಯ ಹೊಂದಿದ ವಾಗ್ಗೇಯಕಾರ ಎಂಬುದು ಒಂದು ದಂತಕಥೆ. ಅವರು ವೇದಿಕೆಯಲ್ಲಿ ಸ್ಪಷ್ಟವಾಗಿ ಹಾಡುವಾಗ ತಮ್ಮದೇ ಆದ ಪ್ರೌಢಿಮೆಯನ್ನು ಮೈಗೂಡಿಸಿ ಕೊಂಡಿದ್ದರು. ಆದರೆ ಇದು ಬಹಳ ಸಮೀಪಿಸಬಹುದಾದ ಹಾಗೂ ಸಂವಾದಾತ್ಮಕವಾಗಿತ್ತು.

2007ರಲ್ಲಿ ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಬೃಹತ್ ಮತ್ತು ವಿಶಿಷ್ಟ ಸಂಗೀತಕಾರ್ಯಕ್ರಮ ಸಂದರ್ಭದಲ್ಲಿ ಅವರೊಂದಿಗೆ ವೈಯಕ್ತಿಕವಾಗಿ ಸಂವಾದಿಸುವ ಸುಸಂದರ್ಭ ನನಗೆ ಒದಗಿತ್ತು. ಉಚಿತ ಆಂಬ್ಯುಲೆನ್ಸ್ ಸೇವೆಯನ್ನು ನಡೆಸುವ ಸಲುವಾಗಿ ಸಮಗ್ರ ಟ್ರಾಮಾಕನ್ಸೋರ್ಟಿಯಂ (ಸಿಟಿಸಿ)ಗೆ ಹಣ ಸಂಗ್ರಹಿಸುವ ಕಾರ್ಯಕ್ರಮ ಆಯೋಜಿಸಲಾಗಿತ್ತು. ಸಿಟಿಸಿ ಒಂದು ಲಾಭೋದ್ದೇಶವಿಲ್ಲದ ಸಂಸ್ಥೆಯಾಗಿದ್ದು, ಅದು ರಸ್ತೆ, ಟ್ರಾಫಿಕ್ ಅಪಘಾತಗಳು ಮತ್ತು ವೈದ್ಯಕೀಯ ತುರ್ತು ಸ್ಥಿತಿಗಳಿಂದ ಅನೇಕರನ್ನು ರಕ್ಷಿಸಿದ್ದು, ಸರಿಯಾದ 'ಪೂರ್ವಆಸ್ಪತ್ರೆ ಆರೈಕೆ' ಪರಿಚಯಿಸುವ ಮೂಲಕ ಬದಲಾವಣೆಯನ್ನು ಸೃಷ್ಟಿಸಿದೆ. ರಕ್ಷಣೆಯ ಹೊರತಾಗಿ ಸಂಸ್ಥೆಯು ಸುಸಜ್ಜಿತ ಆಂಬ್ಯುಲೆನ್ಸ್‌ಗಳು, ತರಬೇತಿ ಪಡೆದ ಅರೆವೈದ್ಯರು, ಸಂವಹನ ವ್ಯವಸ್ಥೆ ಹೊಂದಿದ್ದು, ಪ್ರತಿ ತುರ್ತು ಪರಿಸ್ಥಿತಿಯಲ್ಲಿ ಸರಿಯಾದ ಸಮಯದಲ್ಲಿ, ಸರಿಯಾದ ವ್ಯಕ್ತಿಯಿಂದ, ಸರಿಯಾದ ಸ್ಥಳಕ್ಕೆ, ಸರಿಯಾದ ವಿಧಾನಗಳನ್ನು ಬಳಸಿಕೊಂಡು ಸುರಕ್ಷಿತ ಸಾರಿಗೆ ವ್ಯವಸ್ಥೆ ದೊರಕಿಸುತ್ತದೆ.

ಆ ಬೃಹತ್ ಸಂಗೀತ ಕಾರ್ಯಕ್ರಮದಲ್ಲಿ ದೇಶದ ನಾನಾ ಭಾಗಗಳಿಂದ ವಿವಿಧ ಸಂಪ್ರದಾಯಗಳನ್ನು ಪ್ರತಿನಿಧಿಸುವ 20 ಕಲಾವಿದರು ಇಡೀ ಭಾರತೀಯ ಸಂಗೀತವನ್ನು ಪ್ರದರ್ಶಿಸಿದರು. ಅವರಲ್ಲಿ ಗಮನಾರ್ಹ ಕಲಾವಿದ ಶ್ರೀ ಮಂಗಳಂಪಲ್ಲಿ ಬಾಲಮುರಳಿಕೃಷ್ಣ ಕೂಡಾ ಒಬ್ಬರಾಗಿದ್ದರು. ಒಳ್ಳೆಯ ಉದ್ದೇಶಕ್ಕಾಗಿ ಅವರ ಸಂಗೀತ ಸೇವೆ ನನ್ನ ಜೀವನದಲ್ಲಿ ಸ್ಮರಣೀಯ ಕ್ಷಣವಾಗಿತ್ತು. ಅವರು ಕಾರ್ಯಕ್ರಮದಲ್ಲಿ ಕೇವಲ ಸಕ್ರಿಯವಾಗಿ ಭಾಗವಹಿಸದೆ, ಕರ್ನಾಟಕ ಸಂಗೀತದ ವೈಭವವನ್ನು ಪ್ರದರ್ಶಿಸಿದರು. ಕಾರ್ಯಕ್ರಮದ ಉದ್ದೇಶಕ್ಕಾಗಿ ಅಪಾರವಾಗಿ ಸಹಕರಿಸಿದರು. ಅವರ ಸರಳತೆ, ಕಾಳಜಿ, ಸ್ನೇಹಪರ ಸ್ವಭಾವ, ಸಂಶೋಧನಾ ಸ್ವಭಾವ ನನ್ನ ಅಂತರಂಗವನ್ನು ಮುಟ್ಟಿತು. ಅವರ ಎಲ್ಲಾ ಕೊಡುಗೆಗಳಿಗಾಗಿ ನಾನು ಕೃತಜ್ಞನಾಗಿದ್ದೇನೆ.

■ **ಕನ್ನಡಕ್ಕೆ: ಬಿ.ಎಂ. ಸುನೀತಾ**

## ಬ್ರೈನ್ಸ್ ವಾಯ್ಸ್ ಪತ್ರಿಕೆ ಚಂದಾದಾರರಾಗಿ

**Comprehnsive Trauma Consortium** ಸಂಸ್ಥೆಯ (ಕಾಂಪ್ರೆಹೆನ್ಸೀವ್ ಟ್ರೋಮಾ ಕನ್‌ಸೋರ್ಟಿಯಂ) ವತಿಯಿಂದ ಕಳೆದ ಮೂರು ವರ್ಷಗಳಿಂದ ಬ್ರೈನ್ಸ್ ವಾಯ್ಸ್ ಪತ್ರಿಕೆಯನ್ನು ಪ್ರಕಟಸಲಾಗುತ್ತಿದೆ. ಪತ್ರಿಕೆಯ ಪ್ರಕಟಣೆಯಲ್ಲಿ ಲಾಭ ಮಾಡುವ ಉದ್ದೇಶವಿಲ್ಲ. ಅಪಘಾತದಲ್ಲಿ ನೊಂದವರಿಗೆ ತಕ್ಷಣ ಚಿಕಿತ್ಸೆಗೆ ಜನ್ಮತಾಳಿರುವ ಸಂಘಟನೆಯಿದು. ಇದಕ್ಕೆ ಬರುವ ಮೊತ್ತವನ್ನು ಆ ಉದ್ದೇಶಕ್ಕಾಗಿ ಬಳಸಲಾಗುತ್ತಿದೆ. ಈ ಕೆಳಗಿನ ಖಾತೆಗೆ **Cheque/NEFT/RTGS**ಗಳ ಮೂಲಕ ಪಾವತಿಸಿ.

**ಚಂದಾದಾರರಾಗುವ ಮೂಲಕ ಜೀವ ಉಳಿಸಿ**

**ವಾರ್ಷಿಕ ಚಂದಾ: ರೂ.400/–**
(ಅಂಚೆ ವೆಚ್ಚ ಸೇರಿ)

Postal Address: **BRAINS**
**N0. 560, 9th 'A' Main, Near Indiranagar Metro Station, Bangalore - 560038.**

Scan & Pay

Account Name: **Comprehensive Trauma Consortium**
Bank: **Axis Bank**
Account No. **919010047372470**
IFSC Code: **UTIB0002969**
Branch : **Double Road, Indiranagar, Bangalore**

Printed and Published by **Dr N K Venkataramana** on behalf of BRAINS
from No. 560, 3rd Floor, 9th ' A' Main, Indira Nagar, Bengaluru-560038 and Printed at **Maruthi Printing Press,**
No.90/6-1. 1st cross, Vittal Nagar West, Near Marvel Apartment, Bengaluru-560026. Editor: **Dr N K Venkataramana**